# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜೂನ್ 10, 2021

ಸಂಪುಟ : 48 ಸಂಚಿಕೆ : 27 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಜೂ.14ರ ನಂತರ ಐದು ಹಂತದ ಅನ್‌ಲಾಕ್

ಬೆಂಗಳೂರು, ಜೂ.9 - ಕೊರೊನಾ ಸಾಂಕ್ರಾಮಿಕ ರೋಗ ಪೂರ್ಣ ಪ್ರಮಾಣದಲ್ಲಿ ಹತೋಟಿಗೆ ಬಾರದ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ದಾವಣಗೆರೆ ಸೇರಿದಂತೆ, ಹತ್ತು ಜಿಲ್ಲೆಗಳಲ್ಲಿ ಜೂನ್ 14 ರ ನಂತರವೂ ಒಂದು ವಾರಗಳ ಕಾಲ ಲಾಕ್‌ಡೌನ್ ಮುಂದುವರೆಯುವ ಸಾಧ್ಯತೆ ಇದೆ.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಸಾಂಕ್ರಾಮಿಕ ರೋಗ ಹರಡುವಿಕೆ ಕಡಿಮೆಯಿದ್ದರೂ ಈ ಜಿಲ್ಲೆಗಳಲ್ಲಿ ಶೇ. 10 ರಿಂದ 26 ಪಾಸಿಟಿವಿಟಿ ವರದಿಗಳಿವೆ.

ಬೆಂಗಳೂರು ನಗರದಲ್ಲಿ ಅಚ್ಚರಿ ರೀತಿಯಲ್ಲಿ ಸಾಂಕ್ರಾಮಿಕ ರೋಗ ಹರಡುವಿಕೆ ಶೇ. 45 ರಿಂದ ಶೇ. 2ಕ್ಕೆ ಇಳಿದಿದೆ. ಇಂತಹ ಜಿಲ್ಲೆಗಳಲ್ಲಿ ಬಹುತೇಕ ನಾಳೆ



**ಪಾಸಿಟಿವ್ ಪ್ರಮಾಣ ಹೆಚ್ಚಾಗಿರುವ ದಾವಣಗೆರೆ ಸೇರಿ ಹತ್ತು ಜಿಲ್ಲೆಗಳಲ್ಲಿ ಲಾಕ್‌ಡೌನ್ ಮುಂದುವರಿಕೆ ಸಾಧ್ಯತೆ**

ಇಲ್ಲವೇ ಜೂನ್ 14 ರಿಂದ ಲಾಕ್‌ಡೌನ್ ಸಡಿಲಿಕೆ ಮಾಡಲು ಸರ್ಕಾರ ತೀರ್ಮಾನಿಸಿದೆ.

ತಜ್ಞರು ನೀಡಿರುವ ವರದಿಯನ್ನು ಆಧರಿಸಿ, ಮುಖ್ಯಮಂತ್ರಿಯವರು ಸೋಂಕು ಹೆಚ್ಚಳವಿರುವ ಮೈಸೂರು, ಮಂಡ್ಯ ಸೇರಿದಂತೆ ಹತ್ತು ಜಿಲ್ಲೆಗಳ ಆಡಳಿತದೊಂದಿಗೆ ನಾಳೆ ವಿಡಿಯೋ ಸಂವಾದ ನಡೆಸಲಿದ್ದಾರೆ.

ಈ ಸಂದರ್ಭದಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನೀಡುವ ವರದಿಯನ್ನಾಧರಿಸಿ, ಮುಖ್ಯಮಂತ್ರಿಯವರು ತೀರ್ಮಾನ ಕೈಗೊಳ್ಳಲಿದ್ದಾರೆ. ತಜ್ಞರ ಶಿಫಾರಸ್ಸಿನಂತೆ ಈ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದೆಡೆ ಆರ್ಥಿಕ ಚಟುವಟಿಕೆಗಳಿಗೆ ಸರ್ಕಾರ ಅನುಮತಿ ನೀಡಲಿದೆ.

ಮುಂದಿನ ಜುಲೈ ತಿಂಗಳು ಇಲ್ಲವೇ ನವೆಂಬರ್ ವರೆಗೆ ಸಭೆ, ಸಮಾರಂಭ, ಜಾತ್ರೆಗಳು, ರಾಜಕೀಯ ಸಮಾರಂಭಗಳು ನಡೆಸುವಂತಿಲ್ಲ. ಸಿನಿಮಾ ಮಂದಿರ ಎಂದಿನಂತೆ ಬಂದ್ ಆಗಿರುತ್ತದೆ. ಜೂನ್ ಅಂತ್ಯದವರೆಗೂ ಈಜುಕೊಳ, ಜಿಮ್‌ಗಳನ್ನು ಬಂದ್ ಮಾಡುವ ಸಾಧ್ಯತೆ ಇದೆ.

ಶುಕ್ರವಾರದಿಂದ ಮುಖ್ಯಮಂತ್ರಿ ಯಡಿಯೂರಪ್ಪ ಜಿಲ್ಲಾ ಪ್ರವಾಸ ಕೈಗೊಳ್ಳುತ್ತಿರುವುದರಿಂದ ಗುರುವಾರವೇ ಅನ್‌ಲಾಕ್ ಘೋಷಣೆ ಹೊರಬೀಳಬಹುದು. ಸೋಂಕು ಪ್ರಮಾಣ ಶೇ. 5ಕ್ಕಿಂತ ಹೆಚ್ಚಿರುವ ಜಿಲ್ಲೆಗಳಲ್ಲಿ ಲಾಕ್‌ಡೌನ್ ಮುಂದುವರೆಸಬಹುದು ಎನ್ನಲಾಗುತ್ತಿದೆ. ಬೀದರ್‌ನಲ್ಲಿ ಕಳೆದ ಒಂದು ವಾರದಿಂದ (2ನೇ ಪುಟಕ್ಕೆ)

## ಭತ್ತದ ಬೆಂಬಲ ಬೆಲೆ 72 ರೂ. ಹೆಚ್ಚಳ

ನವದೆಹಲಿ, ಜೂ. 9 – ಕೇಂದ್ರ ಸರ್ಕಾರ ಭತ್ತದ ಬೆಂಬಲ ಬೆಲೆಯನ್ನು 72 ರೂ.ಗಳಷ್ಟು ಹೆಚ್ಚಿಸಿದ್ದು, ಕ್ವಿಂಟಾಲ್‌ಗೆ 1,940 ರೂ.ಗಳೆಂದು ನಿಗದಿ ಪಡಿಸಿದೆ. 2021-22ರ ಮುಂಗಾರು ಹಂಗಾಮಿಗೆ ಭತ್ತವಷ್ಟೇ ಅಲ್ಲದೇ, ಇತರೆ ಬೆಳೆಗಳ ಬೆಂಬಲ ಬೆಲೆಯನ್ನೂ ಹೆಚ್ಚಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ



ತೆಗೆದುಕೊಳ್ಳಲಾಗಿದೆ. ಸಂಪುಟ ಸಭೆಯ ನಂತರ ಈ ಬಗ್ಗೆ ವಿವರ ನೀಡಿರುವ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಕನಿಷ್ಠ ಬೆಂಬಲ ಬೆಲೆ ಈಗ ಇದೆ, ಅದನ್ನು ಹೆಚ್ಚಿಸಲಾಗಿದೆ ಹಾಗೂ ಮುಂದಿನ ದಿನಗಳಲ್ಲೂ ಮುಂದುವರೆಯಲಿದೆ ಎಂದಿದ್ದಾರೆ.

ಸಾಮಾನ್ಯ ಭತ್ತದ ಬೆಂಬಲ ಬೆಲೆಯನ್ನು 2021-22ರ ಸಾಲಿಗೆ 1,940 ರೂ.ಗಳೆಂದು ನಿಗದಿ ಪಡಿಸಲಾಗಿದೆ. ಕಳೆದ ಸಾಲಿನಲ್ಲಿ ಬೆಂಬಲ ಬೆಲೆ 1,868 ರೂ. ಆಗಿತ್ತು. ಗ್ರೇಡ್ ಎ ದರ್ಜೆಯ ಭತ್ತದ ಬೆಂಬಲ ಬೆಲೆ 1,960 ರೂ. ಆಗಿದೆ.

ಸಜ್ಜೆಯ ಬೆಂಬಲ ಬೆಲೆಯನ್ನು 100 ರೂ. ಹೆಚ್ಚಿಸಿ 2,250 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಹೈಬ್ರಿಡ್ ಜೋಳದ ಬೆಂಬಲ ಬೆಲೆಯನ್ನು 118 ರೂ. ಹೆಚ್ಚಿಸಿ 2738 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಮಾಲದಂಡಿ ಜೋಳದ ಬೆಂಬಲ ಬೆಲೆ 2,758 ರೂ. ಆಗಿದೆ.

ರಾಗಿ ಬೆಂಬಲ ಬೆಲೆ 82 ರೂ. ಹೆಚ್ಚಿಸಿ 3,377 ರೂ.ಗಳೆಂದು ನಿಗದಿ ಪಡಿಸಲಾಗಿದೆ. ಮೆಕ್ಕೆಜೋಳ ಬೆಂಬಲ ಬೆಲೆ 20 ರೂ. ಹೆಚ್ಚಾಗಿ 1,870 ರೂ.ಗೆ ತಲುಪಿದೆ.

ತೊಗರಿ ಬೇಳೆ ಬೆಂಬಲ ಬೆಲೆ 300 ರೂ. ಹೆಚ್ಚಾಗಿ 6,300 ರೂ.ಗಳಿಗೆ ತಲುಪಿದೆ. ಹೆಸರು ಬೇಳೆ ಬೆಂಬಲ ಬೆಲೆ 79 ರೂ. ಹೆಚ್ಚಾಗಿ 7,275 ರೂ.ಗಳಿಗೆ ತಲುಪಿದೆ. ಉದ್ದಿನ ಬೇಳೆ ಬೆಂಬಲ ಬೆಲೆ 300 ರೂ. ಹೆಚ್ಚಾಗಿ 6,300 ರೂ.ಗಳಿಗೆ ತಲುಪಿದೆ.

ಶೇಂಗಾ ಬೆಂಬಲ ಬೆಲೆ 275 ರೂ. ಹೆಚ್ಚಾಗಿ 5,550 ರೂ.ಗಳಿಗೆ ತಲುಪಿದೆ. ಸೂರ್ಯಕಾಂತಿ ಬೀಜದ ಬೆಂಬಲ ಬೆಲೆ 130 ರೂ. ಹೆಚ್ಚಾಗಿ 6,015 ರೂ.ಗಳಿಗೆ ತಲುಪಿದೆ.

ಸೋಯಾಬೀನ್ ಬೆಂಬಲ ಬೆಲೆ 3,950, ಎಳ್ಳಿನ ಬೆಂಬಲ ಬೆಲೆ 452 ರೂ. ಹೆಚ್ಚಾಗಿ 7,307, ಗುರೆಳ್ಳು ಬೆಲೆ 235 ರೂ. ಹೆಚ್ಚಾಗಿ 6,930 ರೂ., ಮಧ್ಯಮ ಹತ್ತಿ ಬೆಂಬಲ ಬೆಲೆ 211 ರೂ. ಹೆಚ್ಚಾಗಿ 5,726 ರೂ.ಗಳೆಂದು ನಿಗದಿ ಪಡಿಸಲಾಗಿದೆ.

### ಈ ವರ್ಷ ದಾಖಲೆಯ 418.47 ಲಕ್ಷ ಟನ್ ಗೋಧಿ ಖರೀದಿ

ನವದೆಹಲಿ, ಜೂ. 9 – ಕೇಂದ್ರ ಸರ್ಕಾರ ಈ ವರ್ಷ ದಾಖಲೆಯ 418.47 ಲಕ್ಷ ಟನ್ ಗೋಧಿ ಖರೀದಿಸಿದೆ. ಇದರಿಂದ ಬೊಕ್ಕಸಕ್ಕೆ 82,648 ಕೋಟಿ ರೂ. ವೆಚ್ಚವಾಗಿದೆ. ದೆಹಲಿ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ಮಧ್ಯೆಯೇ ಭಾರೀ ಪ್ರಮಾಣದ ಗೋಧಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲಾಗಿದೆ.



ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಗುಜರಾತ್, ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರಗಳಲ್ಲಿ ಹಿಂದಿನಂತೆಯೇ ಈ ಬಾರಿಯೂ ಸುಗಮವಾಗಿ ಬೆಂಬಲ ಬೆಲೆಯಲ್ಲಿ ಖರೀದಿ ನಡೆದಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಳೆದ ವರ್ಷ ಹಿಂಗಾರು ಅವಧಿಯಲ್ಲಿ 373.22 ಲಕ್ಷ ಟನ್ ಗೋಧಿ ಖರೀದಿಸಲಾಗಿತ್ತು. ಸರ್ಕಾರದ ಖರೀದಿ ಯೋಜನೆಯಿಂದ 46 ಲಕ್ಷ ರೈತರಿಗೆ ಲಾಭವಾಗಿದೆ.

## ವಿದ್ಯುತ್ ಯೂನಿಟ್‌ಗೆ 30 ಪೈಸೆ ಹೆಚ್ಚಳ

ಬೆಂಗಳೂರು, ಜೂ. 9 - ಕೊರೊನಾ ಸಾಂಕ್ರಾಮಿಕ ರೋಗದಿಂದ ತತ್ತರಿಸಿರುವ ಜನತೆಯ ಮೇಲೆ ವಿದ್ಯುತ್ ದರ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಬರೆ ಎಳೆದಿದೆ.

ಪ್ರತಿ ಯೂನಿಟ್‌ಗೆ 30 ಪೈಸೆ ಹೆಚ್ಚಳ ಮಾಡಿದ್ದು, ಪರಿಷ್ಕೃತ ದರ ಏಪ್ರಿಲ್ 1, 2021 ರ ಪೂರ್ವಾನ್ವಯದಿಂದ ಜಾರಿಗೆ ಬರಲಿದೆ.



**ಏಪ್ರಿಲ್ ತಿಂಗಳಿನಿಂದಲೇ ಪೂರ್ವಾನ್ವಯ**

ವಿದ್ಯುತ್ ಪ್ರಸರಣ ನಿಗಮಗಳು ತಮಗಾಗುತ್ತಿರುವ ನಷ್ಟವನ್ನು ಸರಿದೂಗಿಸಲು ಪ್ರತಿ ಯೂನಿಟ್‌ಗೆ 1.50 ರೂಪಾಯಿ ಸರಾಸರಿಯಲ್ಲಿ ಹೆಚ್ಚಳ ಮಾಡುವಂತೆ ಕೋರಿದ್ದವು. ಪ್ರಸರಣ ನಿಗಮದ ವರದಿಗಳು ಮತ್ತು ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಪರಿಶೀಲಿಸಿದ ನಂತರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಪ್ರತಿ ಯೂನಿಟ್‌ಗೆ 30 ಪೈಸೆ ಹೆಚ್ಚಳ ಮಾಡಿದೆ. ಸೋರಿಕೆ ತಡೆಗಟ್ಟಿ, ಸರ್ಕಾರದಿಂದ ಬರಬೇಕಾದ ಬಾಕಿ ಪಡೆದು, ತಮ್ಮ ನಷ್ಟವನ್ನು ಸರಿದೂಗಿಸಿಕೊಳ್ಳಿ (2ನೇ ಪುಟಕ್ಕೆ)

## ಮಾರುಕಟ್ಟೆಯಲ್ಲಿ 'ಸಾಮಾನ್ಯ'ವಾದ ವಹಿವಾಟು

**ಒತ್ತಡವಿಲ್ಲದೇ ಖರೀದಿ ನಡೆಸಿದ ನಾಗರಿಕರು**

ದಾವಣಗೆರೆ, ಜೂ. 9 - ಕಳೆದ ಎರಡು ವಾರಗಳಿಂದ ಏರಿಳಿತ ಕಾಣುತ್ತಿದ್ದ ನಗರದ ಮಾರುಕಟ್ಟೆ ಹಾಗೂ ದಿನಸಿ ಮಾರಾಟ ಬುಧವಾರದಂದು ಸಾಮಾನ್ಯದತ್ತ ಮರಳಿದ ಲಕ್ಷಣಗಳು ಕಂಡು ಬಂದಿವೆ.

ಈ ಹಿಂದೆ ಕೊರೊನಾ ತಡೆಯುವ ಸಲುವಾಗಿ ವಾರದಲ್ಲಿ ಒಂದು ದಿನ ಮಾತ್ರ ಖರೀದಿಗೆ ಅವಕಾಶ ಕೊಟ್ಟಿದ್ದ ಕಾರಣ, ಖರೀದಿಗೆ ಅವಕಾಶ ಕೊಟ್ಟಾಗ ಮಾರುಕಟ್ಟೆಯಲ್ಲಿ ತೀವ್ರ ನೂಕು ನುಗ್ಗಲು ಉಂಟಾಗಿತ್ತು. ನಂತರ ಜಿಲ್ಲಾಡಳಿತ ವಾರದಲ್ಲಿ ಮೂರು ದಿನ ಖರೀದಿಗೆ ಅವಕಾಶ ಕೊಟ್ಟಿದ್ದಲ್ಲದೇ, ಮಧ್ಯಾಹ್ನ 12 ಗಂಟೆಯವರೆಗೆ ಬಿಡುವು ನೀಡಿದ್ದು, ಜನ ನಿರಾಳರಾಗಲು ನೆರವಾಗಿದೆ.

ಬುಧವಾರದಂದು ಮಾರುಕಟ್ಟೆ ವಲಯ ಹಾಗೂ ಜನ ವಸತಿ ಪ್ರದೇಶಗಳಲ್ಲಿ ಜನರು ಖರೀದಿಗಾಗಿ ಹಿಂದಿನ ಮಾದರಿಯಲ್ಲಿ ನೂಕು ನುಗ್ಗಲು ನಡೆಸಲಿಲ್ಲ. ಕಳೆದ ಸೋಮವಾರ ಖರೀದಿಗೆ ಅವಕಾಶವಾಗಿತ್ತಲ್ಲದೇ, ಮತ್ತೆ ಶುಕ್ರವಾರ ಖರೀದಿಗೆ ಅವಕಾಶ ಇತ್ತು. ಹೀಗಾಗಿ 'ಸಾಮಾನ್ಯ' ರೀತಿಯಲ್ಲೇ ಖರೀದಿ ನಡೆಯಿತು.

ಜನರು ಸಮಾಧಾನವಾಗಿ ಖರೀದಿ ಮಾಡುತ್ತಿದ್ದಾರೆ. ಹಿಂದಿನಂತೆ ಒತ್ತಡದಿಂದ ಬರುತ್ತಿಲ್ಲ. ವ್ಯಾಪಾರ ಸಾಮಾನ್ಯ ದಿನಗಳ ರೀತಿಯಲ್ಲಿ ನಡೆದಿದೆ (2ನೇ ಪುಟಕ್ಕೆ)

## ಮಕ್ಕಳಿಗೆ ರೆಮ್ಡಿಸಿವಿರ್ ಬೇಡ ಕೇಂದ್ರದ ಮಾರ್ಗಸೂಚಿ

ನವದೆಹಲಿ, ಜೂ. 9 – ಮಕ್ಕಳಿಗೆ ಕೊರೊನಾ ಸೋಂಕು ಬಂದಾಗ ತೆಗೆದುಕೊಳ್ಳಬೇಕಾದ ಕ್ರಮ ಗಳ ಬಗ್ಗೆ ಕೇಂದ್ರ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದ್ದು, ರೆಮ್ಡಿಸಿವಿರ್ ಔಷಧಕ್ಕೆ ಶಿಫಾರಸ್ಸು ಮಾಡಿಲ್ಲ. ಅಲ್ಲದೇ ಸಿ.ಟಿ. ಸ್ಕ್ಯಾನ್ ಅನ್ನು ಎಚ್ಚರಿಕೆಯಿಂದ ಬಳಸುವಂತೆ ತಿಳಿಸಿದೆ.

ಆರೋಗ್ಯ ಸಚಿವಾಲಯದಡಿ ಬರುವ ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶನಾಲಯ (2ನೇ ಪುಟಕ್ಕೆ)

## ದಾವಣಗೆರೆ ಎಸ್ಪಿಯಾಗಿ ರಿಷ್ಯಂತ್

ದಾವಣಗೆರೆ, ಜೂ.9- ರಾಜ್ಯ ಸರ್ಕಾರವು 12 ಐಪಿಎಸ್ ಅಧಿಕಾರಿಗಳನ್ನು ಇಂದು ವರ್ಗಾವರ್ಗಿ ಮಾಡಿದ್ದು, ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನಾಗಿ ಸಿ.ಬಿ. ರಿಷ್ಯಂತ್ ಅವರನ್ನು ನೇಮಕ ಮಾಡಿ, ಆದೇಶಿಸಿದೆ.



ರಿಷ್ಯಂತ್ ಅವರು ಈ ಮೊದಲು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಆಗಿದ್ದರು.

2013 ಬ್ಯಾಚ್ ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿಯಾಗಿರುವ ರಿಷ್ಯಂತ್, ಮೂಲತಃ ಬೆಂಗಳೂರಿನವರಾಗಿದ್ದಾರೆ. ಮಂಗಳೂರಿನಲ್ಲಿ ಎಎಸ್ ಪಿ, ಬಾಗಲಕೋಟೆಯಲ್ಲಿ ಎಸ್ಪಿಯಾಗಿದ್ದ ಅವರು, (2ನೇ ಪುಟಕ್ಕೆ)

## ಪೆಟ್ರೋಲ್ ಬಂಕ್‌ಗಳಲ್ಲಿ '100 ನಾಟೌಟ್' ಅಭಿಯಾನ



ಬೆಂಗಳೂರು, ಜೂ. 9 - ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಕೆ ಮೂಲಕ ಜನರ ಜೇಬು ಲೂಟಿ ಮಾಡುತ್ತಿದೆ. ಇದನ್ನು ಖಂಡಿಸಿ ರಾಜ್ಯದಲ್ಲಿ ಐದು ದಿನಗಳ ಕಾಲ 5 ಸಾವಿರ ಪೆಟ್ರೋಲ್ ಬಂಕ್ ಗಳಲ್ಲಿ '100 ನಾಟೌಟ್' ಅಭಿಯಾನ ಆರಂಭಿಸುತ್ತಿದ್ದೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಇತಿಹಾಸ ಪುಟಕ್ಕೆ ನಾವೆಲ್ಲ ಸಾಕ್ಷಿಯಾಗುತ್ತಿದ್ದೇವೆ. ಮೋದಿ ಅವರ ನೇತೃತ್ವದ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 227 ಕೊರೊನಾ ಸೋಂಕಿತರು ಪತ್ತೆ

ದಾವಣಗೆರೆ, ಜೂ. 9 – ಜಿಲ್ಲೆಯಲ್ಲಿ ಬುಧವಾರ 227 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಏಳು ಜನ ಸಾವನ್ನಪ್ಪಿದ್ದಾರೆ.

ಇದೇ ದಿನ 228 ಜನರು ಗುಣಮುಖರಾಗಿದ್ದು, ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3,846 ಆಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 102, ಹರಿಹರದಲ್ಲಿ 30, ಜಗಳೂರಿನಲ್ಲಿ 23, ಚನ್ನಗಿರಿಯಲ್ಲಿ 26, ಹೊನ್ನಾಳಿಯಲ್ಲಿ 41 ಹಾಗೂ ಹೊರ ಜಿಲ್ಲೆಯ ಐವರು ಸೋಂಕಿತರು ಕಂಡು ಬಂದಿದ್ದಾರೆ.


### ಎಂಟನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀಮತಿ ಯಮುನಾವತಿ**

ಜನನ : 23.05.1965 ಮರಣ : 10.06.2013

*ಯಾರ ಹುಟ್ಟು ಎಲ್ಲೋ? ಯಾರ ಸಾವು ಎಲ್ಲೋ?*
*ಯಾರ ಜೀವನದ ಪಯಣ ಎಲ್ಲಿಗೋ? ಇದನ್ನಾರು ಬಲ್ಲರು?*

ಈ ಜೀವನದ ಪಯಣದಲ್ಲಿ ಸಿಗುವ ಪ್ರೀತಿ, ಪ್ರೇಮ, ಸ್ನೇಹ, ಸಂಬಂಧ, ಸೇವೆ ಸಾಧನಗಳು ಮಾತ್ರ ಶಾಶ್ವತ ಎಂದು ಅರಿತು, ಸಾರ್ಥಕ ಜೀವನ ನಡೆಸಿ ನಮ್ಮೆಲ್ಲರಿಗೂ ಆದರ್ಶಮಯವಾದ ನಿಮ್ಮ ಆಶೀರ್ವಾದ ನಮಗೆ ಸದಾ ಇರಲಿ ಎಂದು ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,

✦ ಪತಿ - ಬಿ.ಹೆಚ್. ಮಲ್ಲೇಶಪ್ಪ (ಸೀಮೆಎಣ್ಣೆ), ಮಹಾನಗರ ಪಾಲಿಕೆ ಮಾಜಿ ಸದಸ್ಯರು
✦ ಎಂ. ಹರೀಶ್-ಪುತ್ರ ✦ ಎಂ. ಲಕ್ಷ್ಮಿ-ಪುತ್ರಿ ✦ ಎಂ. ರೇಖಾ - ಪುತ್ರಿ ✦ ಬಸವರಾಜ - ಮೈದುನ
✦ ದುಗ್ಗಮ್ಮ - ಸಹೋದರಿ ✦ ಪರಮೇಶ್-ಅಳಿಯ ✦ ನಿತೀಶ್ ಹೆಚ್ ✦ ಪಲ್ಲವಿ ಹೆಚ್
✦ ಶ್ರೀಮತಿ ಶ್ವೇತ ಮತ್ತು ಅರುಣ್ ✦ ಭೂಮಿ ✦ ಬಿಂದು ✦ ದೀಕ್ಷಾ ಹೆಚ್ ✦ ಬಸಮ್ಮ - ಅಕ್ಕ
✦ ಲಕ್ಕಪ್ಪ-ಮಗ ✦ ಹನುಮಮ್ಮ-ಅಕ್ಕ ✦ ನಾಜೀಮಾ-ಅಜ್ಜಿ
✦ ವೆಂಕಟೇಶ್ ✦ ರೂಪ ಪರಮೇಶ್ವರಪ್ಪ ✦ ಶಿಲ್ಪ ಮಂಜುನಾಥ್ ✦ ದಾನಮ್ಮ ವೆಂಕಟೇಶ್
✦ ನೀಲಮ್ಮ ಪರಮೇಶ್ ✦ ನಾಗರಾಜ ✦ ಸಂತೋಷ ✦ ಗಣೇಶ ✦ ಕೀರ್ತನ ✦ ಕವನ ✦ ಧ್ರುವ

ಹಿತೈಷಿಗಳು : ✦ ಬಾಡದ ಆನಂದರಾಜ್, ಜಿಲ್ಲಾಧ್ಯಕ್ಷರು ಶೋಷಿತ ವರ್ಗಗಳ ಒಕ್ಕೂಟ.
✦ ಡಿ. ಮಾಲತೇಶ್‌ರಾವ್ ಜಾಧವ್, ಮಾಜಿ ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ.
✦ ಎಂ.ಪಿ.ಕೃಷ್ಣಮೂರ್ತಿ ಪವಾರ್, ಮಾಜಿ ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ಮಹಾ ನಗರ ಪಾಲಿಕೆ.
✦ ಟಿ.ಬಸವರಾಜ್, ಡಿಎಸ್‌ಎಸ್. ಮುಖಂಡರು ✦ ಅನಂತರಾಜ್, ರಿಯಲ್ ಎಸ್ಟೇಟ್
✦ ಉದಯಕುಮಾರ್, ಸದಸ್ಯರು, ಮಹಾನಗರ ಪಾಲಿಕೆ



KIRLOSKAR INSTITUTE OF ADVANCED MANAGEMENT STUDIES
LOCATION- HARIHAR

Enriching Lives

ENTER AS A STUDENT, EVOLVE AS A LEADER!
ADMISSIONS OPEN FOR 2 YEARS RESIDENTIAL PGDM PROGRAM (BATCH 2021-23)

APPLY ONLINE

www.kiams.ac.in




◆ KIRLOSKAR INSTITUTE OF ADVANCED MANAGEMENT STUDIES (KIAMS)

Established in 1991, Kirloskar Institute of Advanced Management Studies (KIAMS) was conceived as a training institute and a knowledge hub for Kirloskar Group Managers, to share their knowledge & learning to bridge the gap and cope with the latest management trends. The institute initially offered Management Development Programs and Consultancy. Taking a leaf out of the rich experience gained from this, KIAMS moved on to offer an AICTE approved PGDM Program from the year 1998. The institute has, since, been endeavoring to achieve excellence in management studies through the ruling paradigm of "Education through values" with 'value' being operative in beliefs, processes and results.

◆ OUR PGDM PROGRAM

The program is approved by the AICTE New Delhi, Ministry of HRD, Government of India, and is imparted by KIAMS in a two-year full time residential mode. The program is offered at Harihar and Pune campuses.

PROGRAM ELECTIVES:
MARKETING, HUMAN RESOURCES, OPERATIONS, FINANCE, BUSINESS ANALYTICS

◆ ELIGIBILITY

A bachelor's degree (10+2+3 OR 10+2+4) in any discipline from a recognized university with not less than 50% overall aggregate marks. Students appearing for the final year examination may also apply.

Visit www.kiams.ac.in to know more about the Admission process

FOR ENQUIRIES
+91-7259884931/+91-7019465182
+91-6360704526
E mail: admissions@kiams.ac.in

SOME OF OUR PROMINENT RECRUITERS
tcs TATA CONSULTANCY SERVICES, Deloitte., HDFC BANK, amazon, pwc, PhonePe, EY

LAST DATE TO APPLY IS 25TH JUNE,2021

Kirloskar Institute of Advanced Management Studies, Yantrapur, Harihar – 577 601, Karnataka (India

# ಪೌಷ್ಠಿಕಾಂಶಯುಕ್ತ ಬೆಳೆಗಳಾದ ಸಜ್ಜೆ, ನವಣೆ, ಬರಗು ಬೆಳೆಯಬೇಕು

**ಹೊನ್ನಾಳಿ - ನ್ಯಾಮತಿ ತಾಲ್ಲೂಕುಗಳಲ್ಲಿ 24,000 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯುತ್ತಿದ್ದು, ಕೇವಲ 800 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರವೇ ತೊಗರಿ ಬೆಳೆಯಲಾಗುತ್ತಿದ್ದು, ಇದನ್ನು ಹೆಚ್ಚಿಸಲು ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.**



### ರೈತರಿಗೆ ಶಾಸಕ ರೇಣುಕಾಚಾರ್ಯ ಕರೆ

ಹೊನ್ನಾಳಿ, ಜೂ.9- ಪ್ರಧಾನಮಂತ್ರಿ ನರೇಂದ್ರ ಮೋದಿಯವರು ರೈತರ ಆದಾಯವನ್ನು ದ್ವಿಗುಣಗೊಳಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಜಾರಿಗೆ ತಂದಿದ್ದು, ರೈತರು ಇದರ ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಕರೆ ನೀಡಿದರು.

ಪಟ್ಟಣದ ವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಇಂದು ಏರ್ಪಾಡಾಗಿದ್ದ ಸರಳ ಕಾರ್ಯ ಕ್ರಮದಲ್ಲಿ ಕೃಷಿ ಅಭಿಯಾನದ ವಾಹನಕ್ಕೆ ಹಸಿರು ನಿಶಾನೆ ತೋರಿಸಿ ಅವರು ಮಾತನಾಡಿದರು.

ಮೆಕ್ಕೆಜೋಳದ ಜೊತೆಗೆ ತೊಗರಿಯನ್ನು ಅಂತರ ಬೆಳೆಯಾಗಿ ಬೆಳೆಯುವಂತೆ ರೈತರಿಗೆ ಉತ್ತೇಜನ ನೀಡುವ ಉದ್ದೇಶದಿಂದ 3900 ರೈತರಿಗೆ ತಲಾ 4 ಕೆ.ಜಿ.ಯಂತೆ 3900 ತೊಗರಿ ಕಿಟ್‌ಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದು ಶಾಸಕರು ತಿಳಿಸಿದರು.

ರೈತರು ಕಮರ್ಷಿಯಲ್ ಬೆಳೆಗಳ ಕಡೆ ಮುಖ ಮಾಡುತ್ತಿದ್ದು, ಅದರ ಬದಲು ಪೌಷ್ಠಿ ಕಾಂಶಯುಕ್ತ ಬೆಳೆಗಳಾದ ಸಜ್ಜೆ, ನವಣೆ, ಬರಗು ಮುಂತಾದವನ್ನು ಬೆಳೆಯಲು ಮನವಿ ಮಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಹಸು, ಎಮ್ಮೆ, ಎತ್ತುಗಳನ್ನು ಸಾಕುವುದರ ಮೂಲಕ ಕೀಟನಾಶಕ ಮತ್ತು ರಸಗೊಬ್ಬರ ಬಳಕೆಯನ್ನು ಕಡಿಮೆ ಮಾಡಿ, ಕೊಟ್ಟಿಗೆ ಗೊಬ್ಬರವನ್ನು ಬಳಸಿ, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವಂತೆ ರೈತರಿಗೆ ಶಾಸಕರು ಕರೆ ನೀಡಿದರು.

ಕೃಷಿ ಇಲಾಖೆಯಿಂದ ವಿಶೇಷ ಸೆಲ್ಫಿ ಬೂತನ್ನು ನಿರ್ಮಿಸಿದ್ದು, ಅದರ ಮೂಲಕ ತೊಗರಿ ಕಿಟ್‌ಗಳನ್ನು ಶಾಸಕರು ಮತ್ತು ಕೃಷಿ ಅಧಿಕಾರಿಗಳು ನೀಡಿದ್ದು ಎಲ್ಲರ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಅಧಿಕಾರಿ ಹಂಸವೇಣಿ, ಜಿಪಂ ಸದಸ್ಯ ಎಂ.ಆರ್.ಮಹೇಶ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ.ಸುರೇಶ್, ಪುರಸಭಾಧ್ಯಕ್ಷ ಕೆ.ವಿ. ಶ್ರೀಧರ್, ಸದಸ್ಯರಾದ ಬಾಬು ಹೋಬಳಿದಾರ್, ರಂಗನಾಥ್, ಸಿಪಿಐ ಟಿ.ವಿ.ದೇವರಾಜ್, ಪಿಎಸ್‌ಐ ಬಸನಗೌಡ ಬಿರಾದಾರ, ಕೆಎಸ್‌ಡಿಎಲ್ ನಿರ್ದೇಶಕ ಶಿವು ಹುಡೇದ್, ಮುಖಂಡರುಗಳಾದ ಇಂಚರ, ಮಂಜು, ಸೇರಿದಂತೆ ಮತ್ತಿತರರಿದ್ದರು.

# ಪ್ರೊ.ಬಿ. ಕೃಷ್ಣಪ್ಪ ಹಚ್ಚಿದ ಸಮಾನತೆಯ ದೀಪ ನಮಗೆ ಆದರ್ಶವಾಗಬೇಕು



70ರ ದಶಕದ ಸಾಮಾಜಿಕ ವ್ಯವಸ್ಥೆಯಲ್ಲಿ ಧಮನಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಿದ್ದ ಕೃಷ್ಣಪ್ಪ ಅವರು ಎಲ್ಲಾ ಅಸಹಾಯಕ ಶೋಷಿತ ಜನರ ಪರವಾಗಿ ಭೂ ಹೋರಾಟ ರೂಪಿಸಿದ್ದರು. ಮಲ ಹೊರುವ ಪದ್ಧತಿಯ ವಿರುದ್ಧ ಆಡಳಿತಗಾರರ ಗಮನ ಸೆಳೆದ್ದರು. ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಮಹಿಳೆಯರ ವಿರುದ್ಧದ ಶೋಷಣೆ ನಿಲ್ಲಿಸಿದ್ದರು.

- ಪಿ.ಜೆ. ಮಹಾಂತೇಶ್,
ಸಂಚಾಲಕರು ತಾಲ್ಲೂಕು ದಸಂಸ

### ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆಶಯ

ಹರಿಹರ, ಜೂ.9- ದಲಿತ ಸಂಘರ್ಷ ಸಮಿತಿ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪ ಅವರು ಹಚ್ಚಿದ ಸಮಾನ ತೆಯ ದೀಪ ನಮಗೆಲ್ಲಾ ಆದರ್ಶವಾಗಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಆಶಯ ವ್ಯಕ್ತಪಡಿಸಿದರು.

ಕೃಷ್ಣಪ್ಪ ಅವರ 83ನೇ ಜಯಂತಿ ನಿಮಿತ್ತ ಇಂದು ನಗರದ ಹೊರವಲಯದಲ್ಲಿರುವ ಮೈತ್ರಿ ವನದಲ್ಲಿ ಕೃಷ್ಣಪ್ಪನವರ ಸಮಾಧಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದಲಿತರು, ಹಿಂದುಳಿ ದವರು ಹಾಗೂ ಮಹಿಳೆಯರ ಹಕ್ಕುಗಳ ಬಗ್ಗೆ ಕೃಷ್ಣಪ್ಪ ಅವರು ಮಾಡಿದ ಹೋರಾಟವನ್ನು ನಾಡಿನ ಜನತೆ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ಇಡೀ ರಾಜ್ಯದಲ್ಲಿ ದಲಿತರಲ್ಲಿ ಜಾಗೃತಿಯ ದೀಪ ಹಚ್ಚಿದ ಪ್ರೊ. ಬಿ.ಕೆ. ಹರಿಹರದವರಾಗಿರುವುದು ನಮ್ಮ ಭಾಗ್ಯ. ಅವರು ಕರ್ನಾಟಕದ ಡಾ. ಅಂಬೇಡ್ಕರ್ ಆಗಿದ್ದು, ಅವರ ಚಿಂತನೆಗಳನ್ನು ನಾವು ಪಾಲಿಸಬೇಕು ಎಂದು ಕರೆ ನೀಡಿದರು.

ದಸಂಸ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಮಾತನಾಡಿ, ದಲಿತರ ಹಕ್ಕುಗಳ ರಕ್ಷಣೆಯ ಜೊತೆಗೆ ಧರ್ಮದ ಹೆಸರಿನಲ್ಲಿ ಮಹಿಳೆ ಯರ ಶೋಷಣೆ ನಡೆಯುತ್ತಿರುವುದನ್ನು ತಡೆದ ಶ್ರೇಯಸ್ಸು ಪ್ರೊ.ಬಿ.ಕೆ. ಅವರಿಗೆ ಸಲ್ಲುತ್ತದೆ ಎಂದರು.

ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಕೃಷ್ಣಪ್ಪನವರ ಹೆಸರಿನಲ್ಲಿ ದಾವಣಗೆರೆ ವಿವಿಯಲ್ಲಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಲು ಕೋರಿಕೆ ಸಲ್ಲಿಸಿದ್ದು, ಅದನ್ನು ಆದಷ್ಟು ಬೇಗ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ದಾವಣಗೆರೆ ನ್ಯಾಯವಾದಿ ಕೆ. ಇಮ್ರಾನ್ ಖಲೀಲ್ ಉಲ್ಲಾ, ಗ್ರಾ.ಪಂ. ಸದಸ್ಯರಾದ ಹರಳಹಳ್ಳಿ ಎಚ್.ಎಂ.ಹನುಮಂತಪ್ಪ, ಗುಳದಹಳ್ಳಿ ಎ.ಕೆ. ಮಂಜಪ್ಪ, ದಾವಣಗೆರೆ ತಾಲ್ಲೂಕು ಸಂಚಾಲಕ ಪರಮೇಶ್ ಪುರದಾಳ, ಡಾ. ಜಗನ್ನಾಥ್, ನಗರ ಸಂಚಾಲಕ ಪ್ರದೀಪ್, ಹಾಲೇಶಪ್ಪ ಕುಂದುವಾಡ, ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕ ಮಹಾಂತೇಶ್, ಯುವರಾಜ್, ಪರಶುರಾಮ ಹೊಸಪಾಳ್ಯ, ಹನುಮಂತ ಬೇತೂರು, ಅಣ್ಣಪ್ಪ, ಹಾಲೇಶ್ ಕುಣೆಬೆಳಕೆರೆ, ಹನುಮಂತ, ಸಂಜಯ್, ಸುಹಾಸ್, ಡಿ.ಎಂ. ಮಂಜುನಾಥ್, ಕರಿಬಸಪ್ಪ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವಿದ್ಯುತ್ ಯೂನಿಟ್‌ಗೆ 30 ಪೈಸೆ ಹೆಚ್ಚಳ

**(1ನೇ ಪುಟದಿಂದ)** ಎಂದು ಪ್ರಸರಣ ನಿಗಮದ ಬೇಡಿಕೆಯನ್ನು ತಳ್ಳಿ ಹಾಕಿ ಪ್ರತಿ ಯೂನಿಟ್‌ಗೆ ಈ ಪ್ರಮಾಣದ ದರ ಹೆಚ್ಚಳ ಮಾಡಿದೆ.

ಭಾಗ್ಯಜ್ಯೋತಿ ಸೇರಿದಂತೆ ವಿವಿಧ ಕಲ್ಯಾಣಗಳ ಉಚಿತ ವಿದ್ಯುತ್ ದರದಲ್ಲಿ ಯಾವುದೇ ಏರುಪೇರು ಮಾಡಿಲ್ಲ. 10 ಹೆಚ್‌ಪಿ ಕೆಳಗಿನ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯನ್ನು ಆಯೋಗ ಹಾಗೆಯೇ ಮುಂದುವರೆಸಿದೆ. ಲಾಕ್‌ಡೌನ್ ಪರಿಸ್ಥಿತಿಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ ದರ ಪರಿಷ್ಕರಣೆ ಬಾಕಿಯನ್ನು ಯಾವುದೇ ಬಡ್ಡಿ ವಿಧಿಸದೇ ಮುಂದಿನ ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ ಕ್ರಮವಾಗಿ ವಸೂಲಿ ಮಾಡಲು ಆದೇಶಿಸಲಾಗಿದೆ.

ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಕೇಂದ್ರ ಚುನಾವಣಾ ಆಯೋಗ ಚುನಾವಣೆಗಳನ್ನು ಪ್ರಕಟಿಸಿದ್ದರಿಂದ ದರ ಪರಿಷ್ಕರಣೆ ಮಾಡುವುದು ವಿಳಂಬವಾಯಿತು ಎಂದು ಆಯೋಗ ಸ್ಪಷ್ಟಪಡಿಸಿದೆ. ಕೊರೊನಾ ಕಾರಣದಿಂದ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿಕೂಲ ಪರಿಣಾಮ ಉಂಟಾಗಿದ್ದು, ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ದರ ಪರಿಷ್ಕರಣೆ ಮಾಡಲಾಗಿದೆ ಎಂದು ಆಯೋಗ ತನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಏರಿಕೆಯಾಗುತ್ತಿರುವ ಕಾರ್ಯ ಮತ್ತು ನಿರ್ವಹಣಾ ವೆಚ್ಚ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಲು ಪ್ರತಿ ಯೂನಿಟ್‌ಗೆ 1.50 ರೂಪಾಯಿ ಹೆಚ್ಚಳ ಮಾಡಬೇಕೆಂದು ಪ್ರಸರಣ ನಿಗಮ ಗಳು ಮನವಿ ಮಾಡಿದ್ದವು. ಕಂಪನಿಗಳು ಸುಲಲಿತವಾಗಿ ನಡೆಯಲು ದರ ಹೆಚ್ಚಳ ಅನಿವಾರ್ಯ ಎಂದು ಕೋರಿದ್ದವು. ಆದರೆ, ಆಯೋಗ ಸಾರ್ವಜನಿಕರ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದಿದೆ.

ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ 10 ಪೈಸೆಯಷ್ಟು ಹೆಚ್ಚಳ ಮಾಡಲಾಗಿದೆ. ಹಾಲಿ ಇರುವ ಪ್ರತಿ ಯೂನಿಟ್ ದರಕ್ಕೆ ಹೆಚ್ಚಳವನ್ನು ಸೇರಿಸಿ, ಏಪ್ರಿಲ್ 1 ರಿಂದ ಪೂರ್ವಾನ್ವಯದಂತೆ ಪರಿಷ್ಕರಣೆ ಮಾಡಲಾಗಿದೆ.

ಕೈಗಾರಿಕೆಗಳು ರಾತ್ರಿ 10 ಗಂಟೆಯಿಂದ ಮುಂಜಾನೆ 6 ಗಂಟೆಯವರೆಗೂ ಬಳಕೆ ಮಾಡುವ ವಿದ್ಯುತ್‌ಗೆ ಪ್ರತಿ ಯೂನಿಟ್‌ಗೆ ಒಂದು ರೂಪಾಯಿ ರಿಯಾಯಿತಿಯನ್ನು ರದ್ದುಪಡಿಸಲಾಗಿದೆ. ಕಡಿಮೆ ಮತ್ತು ಮಧ್ಯಮ ವರ್ಗದ ಗೃಹ ಬಳಕೆ ಗ್ರಾಹಕರ ವಿದ್ಯುಚ್ಛಕ್ತಿ ಬಳಕೆಯನ್ನು ಉತ್ತೇಜಿಸಲು ಹಾಲಿ 30 ಯೂನಿಟ್‌ಗಳ ಮೊದಲ ಹಂತವನ್ನು 50 ಯೂನಿಟ್‌ಗೆ ಹೆಚ್ಚಿಸಲಾಗಿದೆ.

ವಿದ್ಯುತ್ ವಾಹನ ಮತ್ತು ಇಂಧನ ಶೇಖರಣೆ ವಿಷಯದ ಹಿನ್ನೆಲೆಯಲ್ಲಿ ಶುದ್ಧ ಇಂಧನ ಮತ್ತು ವಿದ್ಯುತ್ ವಾಹನ ಬಳಕೆಗೆ ಉತ್ತೇಜಿಸಲು ಹಾಗೂ ಶೇ. 100 ರಷ್ಟು ವಿದ್ಯುತ್ ಚಲನಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ವರ್ಗಕ್ಕೆ ಹಲವು ರಿಯಾಯಿತಿ ನೀಡಿದೆ.

# ರಸ್ತೆಯುದ್ದಕ್ಕೂ ಅಗಲಿದ ನಾಯಕನಿಗೆ ಅಂತಿಮ ನಮನ

### ರಾಣೇಬೆನ್ನೂರು



ರಾಣೇಬೆನ್ನೂರು, ಜೂ.9- ಬೆಂಗಳೂರಿ ನಲ್ಲಿ ನಿನ್ನೆ ನಿಧನರಾದ ಹಿರಿಯ ಶಾಸಕ ಸಿ.ಎಂ. ಉದಾಸಿ ಅವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗಾಗಿ ಹಾನಗಲ್ಲಿಗೆ ತೆಗೆದುಕೊಂಡು ಹೋಗುವ ಮಾರ್ಗ ಮಧ್ಯೆ ಹಾವೇರಿ ಜಿಲ್ಲೆ ಪ್ರವೇಶಿಸಿದ ವಾಹನವನ್ನು ಜಿಲ್ಲೆಯ ಹೆಬ್ಬಾಗಿಲು ಕೋಡಿಯಾಲ ಹೊಸಪೇಟೆಯಲ್ಲಿ ಮಾಲಾ ರ್ಪಣೆಯೊಂದಿಗೆ ಶಾಸಕ ಅರುಣಕುಮಾರ್ ಪೂಜಾರ ವಿದಾಯ ಹೇಳಿದರು.

ರಾಣೇಬೆನ್ನೂರಿನ ಹೆದ್ದಾರಿಯ ಹಲಗೇರಿ ಕ್ರಾಸ್ ಬಳಿ ನೆರೆದಿದ್ದ ಜನ ಸಮೂಹದೊಂದಿಗೆ ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಮಾಲಾರ್ಪಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು. ಸಚಿವ ಶಂಕರ್, ಅರಣ್ಯ ಅಭಿವೃದ್ಧಿ ನಿಗಮದ ನಿರ್ದೇಶಕಿ ಭಾರತಿ ಜಂಬಿಗಿ, ವಾಣಿಜ್ಯೋದ್ಯಮ ಸಂಸ್ಥೆ ಉಪಾಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ವಾಯವ್ಯ ಸಾರಿಗೆ ಸಂಸ್ಥೆ ನಿರ್ದೇಶಕ ಸಂತೋಷ ಪಾಟೀಲ, ಜಿ.ಪಂ. ಸದಸ್ಯ ಪ್ರಕಾಶ ಬನ್ನಿಕೋಡ, ಮಾಜಿ ಶಾಸಕ ಬಿ.ಎಚ್. ಬನ್ನಿಕೋಡ ಇದ್ದರು.

ಬಸವರಾಜ ಪಟ್ಟಣಶೆಟ್ಟಿ, ಎ.ಬಿ. ಪಾಟೀಲ, ಉಮೇಶ್ ಪಟ್ಟಣಶೆಟ್ಟಿ, ಸೋಮು ಗೌಡಶಿವಣ್ಣ ನವರ, ಕೊಟ್ರೇಶ್ ಎಮ್ಮಿ, ಉಮೇಶ ಹೊನ್ನಾಳಿ ಸೇರಿದಂತೆ, ಕಾಟನ್ ಹಾಗೂ ನೆಹರು ಮಾರ್ಕೆಟ್ ವರ್ತಕರ ಸಮೂಹ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಬಸವರಾಜ ಕೇಲಗಾರ, ವಿಶ್ವನಾಥ ಪಾಟೀಲ, ಶೇಖು ನರಸಗೊಂಡರ, ನಗರ-ಗ್ರಾಮೀಣ ಭಾಗದ ಬಿಜೆಪಿ ಮುಖಂಡರು, ನಗರಸಭೆ ಸದಸ್ಯರು, ಎಪಿಎಂಸಿ ಸದಸ್ಯರು ನೆರೆದಿದ್ದರು.

ಮಾರ್ಗ ಮಧ್ಯದಲ್ಲಿ ಮಾಕನೂರ ಕ್ರಾಸ್, ಚಳಗೇರಿ, ಕಮದೋಡ, ಕಾಕೋಳ, ಮೋಟೆಬೆನ್ನೂರು, ಹಾವೇರಿ ನಗರ, ಆಲದಕಟ್ಟಿ, ಸಂಗೂರು, ಆಡೂರು, ಅಕ್ಕಿಆಲೂರು ಮುಂತಾದೆಡೆ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ಮಾಲಾರ್ಪಣೆಯೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಎಲ್ಲೆಡೆ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು.

# ಕೊರೊನಾ ವಿರುದ್ಧ 'ಸರ್ಜಿಕಲ್ ದಾಳಿ' ಮಾಡಿ

### ಹೈಕೋರ್ಟ್

ಮುಂಬೈ, ಜೂ. 9 – ಕೇಂದ್ರ ಸರ್ಕಾರ ಕೊರೊನಾ ವಿರುದ್ಧ 'ಸರ್ಜಿಕಲ್ ದಾಳಿ'ಯಂತೆ ಕ್ರಮ ತೆಗೆದುಕೊಳ್ಳಬೇಕು. ವೈರಸ್ ಸೋಂಕಿತರು ಬರುವುದನ್ನು ಕಾಯುತ್ತಾ ಕುಳಿತುಕೊಳ್ಳಬಾರದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತ ಹಾಗೂ ನ್ಯಾಯಮೂರ್ತಿ ಜಿ.ಎಸ್. ಕುಲಕರ್ಣಿ ಅವರನ್ನು ಒಳ ಗೊಂಡ ಪೀಠ, ಮನೆಯ ಬಳಿಗೆ ಲಸಿಕೆ ನೀಡುವ ಕೇಂದ್ರದ ಯೋಜನೆಯನ್ನು ತರಾಟೆಗೆ ತೆಗೆದುಕೊಂಡಿದೆ.

ಕೊರೊನಾ ನಮ್ಮ ಅತಿ ದೊಡ್ಡ ಶತ್ರುವಾಗಿದೆ. ನಾವು ಅದನ್ನು ಹೊಡೆದುರುಳಿಸಬೇಕಿದೆ. ಮನೆಯಿಂದ ಹೊರ ಬರಲು ಸಾಧ್ಯವಾಗದ ಕೆಲವರಲ್ಲಿ ಸೋಂಕಿರುತ್ತದೆ. ಸರ್ಕಾರ ಸರ್ಜಿಕಲ್ ದಾಳಿಯ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ನೀವು ಗಡಿಯಲ್ಲಿ ಕುಳಿತು, ವೈರಸ್ ಹೊಂದಿರುವವರು ನಿಮ್ಮ ಬಳಿ ಲಸಿಕೆಗಾಗಿ ಬರಲಿ ಎಂದು ಕಾಯುತ್ತಿದ್ದೀರಿ. ನೀವು ಶತ್ರುವಿನ ಜಾಗಕ್ಕೆ ಹೋಗುತ್ತಿಲ್ಲ ಎಂದು ಕೋರ್ಟ್ ಹೇಳಿದೆ.

ಸರ್ಕಾರ ಜನರ ಕಲ್ಯಾಣಕ್ಕಾಗಿ ನಿರ್ಧಾರ ತೆಗೆದುಕೊಳ್ಳುತ್ತಿದೆ. ಆದರೆ, ನಿರ್ಧಾರಗಳು ನಿಧಾನವಾಗುತ್ತಿರುವುದರಿಂದ ಅಮೂಲ್ಯ ಜೀವಗಳು ಬಲಿಯಾಗುತ್ತಿವೆ ಎಂದು ನ್ಯಾಯಾಲಯ ಹೇಳಿದೆ.

ಮನೆ ಮನೆಗೆ ತೆರಳಿ ಲಸಿಕೆ ಹಾಕಬೇಕು ಎಂದು ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ. 75 ವರ್ಷ ಮೀರಿದವರು, ವಿಕಲ ಚೇತನರು ಹಾಗೂ ಹಾಸಿಗೆ ಹಿಡಿದವರಿಗೆ ಮನೆಯಿಂದ ಹೊರ ಬರುವುದು ಕಷ್ಟವಾಗುತ್ತದೆ, ಅವರ ಮನೆಗೇ ತೆರಳಿ ಲಸಿಕೆ ಹಾಕಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಪ್ರಸಕ್ತ ಮನೆ ಮನೆಗೆ ತೆರಳಿ ಲಸಿಕೆ ಹಾಕುವುದು ಸಾಧ್ಯವಾಗದು. ಆದರೆ, ಮನೆ ಬಳಿ ಲಸಿಕಾ ಕೇಂದ್ರಗಳನ್ನು ರೂಪಿಸಿ ಲಸಿಕೆ ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿತ್ತು.

# ಮುಜರಾಯಿ ಇಲಾಖೆಯಿಂದ ಅರ್ಚಕರಿಗೆ ಕಿಟ್



### ಹರಪನಹಳ್ಳಿ

ಹರಪನಹಳ್ಳಿ, ಜೂ.9- ಕೊರೊನಾ 2ನೇ ಅಲೆ ಹಿನ್ನೆಲೆಯಲ್ಲಿ ತಾಲ್ಲೂಕಿನ 59 ದೇವಸ್ಥಾನಗಳ ಅರ್ಚಕರಿಗೆ ಪಟ್ಟಣದ ಗೋಕರ್ಣೇಶ್ವರ ದೇವಸ್ಥಾನ ಆವರಣ ದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ದಿನಸಿ ಪದಾ ರ್ಥಗಳನ್ನು ಶಾಸಕ ಜಿ. ಕರುಣಾಕರ ರೆಡ್ಡಿ ವಿತರಿಸಿದರು.

ಮುಖ್ಯಮಂತ್ರಿಗಳು ಸರ್ಕಾರದ 2ನೇ ಪ್ಯಾಕೇಜ್ ಘೋಷಣೆಯಲ್ಲಿ ಅರ್ಚಕರಿಗೆ 3000 ರೂ. ಹಣವನ್ನು ಅವರ ಖಾತೆಗಳಿಗೆ ನೇರವಾಗಿ ಹಾಕಲಿದ್ದು, ತಾವುಗಳು ತಪ್ಪದೇ ಸೇವಾಸಿಂಧು ಮೂಲಕ ಅರ್ಜಿ ಸಲ್ಲಿಸಿ ಎಂದು ತಿಳಿಸಿದರು.

ಈ ವೇಳೆ ತಹಶೀಲ್ದಾರ್ ಎಲ್.ಎಂ. ನಂದೀಶ್, ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಪುರಸಭಾ ಮುಖ್ಯಾಧಿ ಕಾರಿ ನಾಗರಾಜನಾಯ್ಕ್, ಪುರಸಭೆ ಸದಸ್ಯರುಗಳಾದ ಕಿರ ಣಕುಮಾರ ಶಾನಭೋಗ, ಜಾವೀದ್, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ್, ಯು.ಪಿ. ನಾಗರಾಜ್ ಇನ್ನಿತರರಿದ್ದರು.

# '100 ನಾಟೌಟ್' ಅಭಿಯಾನ

**(1ನೇ ಪುಟದಿಂದ)** ಬಿಜೆಪಿ ಸರ್ಕಾರ ದಾಖಲೆಗಳನ್ನು ಮುರಿಯುತ್ತಿದೆ. ಪೆಟ್ರೋಲ್ ಬೆಲೆ 100 ಗಡಿ ದಾಟಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ರಾಜ್ಯಾದ್ಯಂತ '100 ನಾಟೌಟ್' ಆಂದೋಲನ ಹಮ್ಮಿಕೊಂಡಿದೆ. ಈ ಪ್ರತಿಭಟನೆ ಇದೇ ತಿಂಗಳು 11 ರಿಂದ 15 ರವರೆಗೂ ಐದು ದಿನಗಳ ಕಾಲ 5 ಸಾವಿರ ಪೆಟ್ರೋಲ್ ಬಂಕ್ ಗಳ ಮುಂದೆ ನಡೆಯಲಿದೆ ಎಂದವರು ತಿಳಿಸಿದರು.

ಜೂ. 11 ರಂದು ಎಲ್ಲಾ ಜಿಲ್ಲಾ ಕೇಂದ್ರ, 12 ರಂದು ತಾಲ್ಲೂಕು ಕೇಂದ್ರಗಲ್ಲಿ, 13 ರಂದು ಎಲ್ಲಾ ಜಿಲ್ಲಾ ಪಂಚಾಯಿತಿ ಹಾಗೂ ಹೋಬಳಿ ಕೇಂದ್ರಗಳಲ್ಲಿ, 14 ರಂದು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪೆಟ್ರೋಲ್ ಬಂಕ್‌ಗಳಲ್ಲಿ, 15 ರಂದು ಪ್ರಮುಖ ಪೆಟ್ರೋಲ್ ಬಂಕ್‌ಗಳಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

ನಮ್ಮ ಎಲ್ಲಾ ಘಟಕಗಳಾದ ಯೂತ್ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಎನ್‌ಎಸ್‌ಯುಐ, ರೈತ ಘಟಕ, ಹಿಂದುಳಿದ, ಅಲ್ಪಸಂಖ್ಯಾತ ಘಟಕ, ಬ್ಲಾಕ್, ಜಿಲ್ಲಾ ಕಾಂಗ್ರೆಸ್ ಸದಸ್ಯರು. ಐದು ಸಾವಿರ ಪೆಟ್ರೋಲ್ ಬಂಕ್ ಗಳಲ್ಲಿ ಬೆಳಗ್ಗೆ 11 ರಿಂದ 12 ರವರೆಗೂ ಒಂದು ಗಂಟೆಗಳ ಕಾಲ ಪ್ರತಿಭಟನೆ ಮಾಡುತ್ತಿದ್ದಾರೆ. ಎಲ್ಲಾ ಜಿಲ್ಲೆಗಳ ಉಸ್ತುವಾರಿಗೆ ಒಬ್ಬೊಬ್ಬ ನಾಯಕರನ್ನು ನೇಮಿಸಲಾಗುತ್ತಿದೆ. ಕೊರೊನಾ ಭ್ರಷ್ಟಾಚಾರ ವಿಚಾರವಾಗಿ ನಮ್ಮ ನಾಯಕರು ಪ್ರತಿ ಜಿಲ್ಲೆಗೆ ಹೋಗಿ ಪತ್ರಿಕಾಗೋಷ್ಠಿ ಮಾಡಿದಂತೆ, ಈಗಲೂ ಪ್ರತಿಭಟನೆ ನೇತೃತ್ವಕ್ಕೆ ನಾಯಕರನ್ನು ನೇಮಕ ಮಾಡಲಾಗುವುದು. ಈ ಉಸ್ತುವಾರಿ ಹೊತ್ತಿರುವ ನಾಯಕರು ಜೂಮ್ ಮೂಲಕ ಪ್ರತಿಭಟನೆ ವೀಕ್ಷಿಸಬೇಕು.


ಈ ಪ್ರತಿಭಟನೆಯ 1 ನಿಮಿಷದ ವಿಡಿಯೋ ಮಾಡಿ, ಪಕ್ಷದ ಐಟಿ ಸೆಲ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗಕ್ಕೆ ಕಳುಹಿಸಬೇಕು. ಅದನ್ನು ಎಐಸಿಸಿಗೂ ಕಳುಹಿಸಲಾಗುವುದು ಎಂದು ಶಿವಕುಮಾರ್ ಹೇಳಿದರು.

# ನೂತನ ಎಸ್ಪಿ ಆಗಿ ರಿಷ್ಯಂತ್

**(1ನೇ ಪುಟದಿಂದ)** ಮೈಸೂರಿನಲ್ಲಿ ಖಡಕ್ ಪೋಲಿಸ್ ಅಧಿಕಾರಿ ಎಂದು ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ರಿಷ್ಯಂತ್ ಅವರು ಶಾಸಕ ಮತ್ತು ಚಿತ್ರ ನಿರ್ಮಾಪಕ ಮುನಿರತ್ನ ಅವರ ಅಳಿಯ.

**ಹಾವೇರಿ ಜಿಲ್ಲೆಗೆ ಹನುಮಂತರಾಯ:** ದಾವಣಗೆರೆ ಜಿಲ್ಲಾ ಎಸ್ಪಿಯಾಗಿದ್ದ ಹನುಮಂತರಾಯ ಅವರನ್ನು ಹಾವೇರಿ ಜಿಲ್ಲೆಗೆ ವರ್ಗಾವಣೆ ಮಾಡಲಾಗಿದೆ.


## 15ನೇ ವಾರ್ಷಿಕ ಪುಣ್ಯಸ್ಮರಣೆ



ಬಿ. ಕೋಗಾಚಾರ್
(ಮರಣ : 10-06-2006)



ಶ್ರೀಮತಿ ಲೀಲಾವತಿ ಕೋಗಾಚಾರ್
(ಮರಣ: 9.2.2006)

ಹುಟ್ಟುವಾಗ ಉಸಿರಿತ್ತು ಹೆಸರಿರಲಿಲ್ಲ. ಸಾಯುವಾಗ ಹೆಸರಿತ್ತು ಉಸಿರು ಇರಲಿಲ್ಲ. ಹುಟ್ಟು ಸಾವುಗಳ ನಡುವೆ ನೀವು ಬಿಟ್ಟು ಹೋದ ಆದರ್ಶಗಳೇ ನಮಗೆ ದಾರಿದೀಪ

ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ ಸದಾ ಚಿರಶಾಂತಿಯನ್ನು ಪ್ರಾರ್ಥಿಸುವ ಮಕ್ಕಳಾದ

ರವಿಚಂದ್ರ, ಬಿ.ಕೋಗಾಚಾರ್ ಆಭರಣ ತಯಾರಕರು,
ಕಾಯಿಪೇಟೆ, ದಾವಣಗೆರೆ. ಮೊ. 98443 28445


# ರೆಮ್ಡಿಸಿವಿರ್ ಬೇಡ ಕೇಂದ್ರದ ಮಾರ್ಗಸೂಚಿ

**(1ನೇ ಪುಟದಿಂದ)** ಮಾರ್ಗಸೂಚಿ ಪ್ರಕಟಿಸಿದ್ದು, ಲಕ್ಷಣ ರಹಿತರು ಹಾಗೂ ಲಘು ಲಕ್ಷಣ ಹೊಂದಿರುವವರಿಗೆ ಸ್ಟಿರಾಯ್ಡ್ ನೀಡುವುದು ಹಾನಿಕಾರಕ ಎಂದು ತಿಳಿಸಿದೆ.

ತೀವ್ರ ಹಾಗೂ ಗಂಭೀರ ಪ್ರಕರಣಗಳೊಂದಿಗೆ ಆಸ್ಪತ್ರೆಗೆ ಸೇರುವವರಿಗೆ ಮಾತ್ರ ಕಠಿಣ ನಿಗಾದಲ್ಲಿ ಸ್ಟಿರಾಯ್ಡ್ ನೀಡಬೇಕು ಎಂದು ತಿಳಿಸಲಾಗಿದೆ.

ಮಕ್ಕಳಿಗೆ ರೆಮ್ಡಿಸಿವಿರ್ ಶಿಫಾರಸ್ಸು ಮಾಡಿಲ್ಲ. 18 ವರ್ಷದೊಳಗಿನ ಮಕ್ಕಳಿಗೆ ಸ್ಟಿರಾಯ್ಡ್ ಸುರಕ್ಷಿತ ಎಂಬುದಕ್ಕೆ ದಾಖಲೆಗಳಿಲ್ಲ. ಶ್ವಾಸಕೋಶದಲ್ಲಿ ಆಗಿರುವ ಹಾನಿಯ ಬಗ್ಗೆ ತಿಳಿಯಲು ಹೆಚ್.ಆರ್. ಸಿ.ಟಿಯನ್ನು ಸತರ್ಕವಾಗಿ ಬಳಸಬೇಕು. ಹೆಚ್.ಆರ್.ಸಿ.ಟಿ. ಮೂಲಕ ಪಡೆಯುವ ಹೆಚ್ಚುವರಿ ಮಾಹಿತಿ ಚಿಕಿತ್ಸೆಯ ಮೇಲೆ ಬೀರುವ ಪರಿಣಾಮ ಕಡಿಮೆ ಎಂದು ತಿಳಿಸಲಾಗಿದೆ.

# ಜೂ.14ರ ನಂತರ ಐದು ಹಂತದ ಅನ್‌ಲಾಕ್

**(1ನೇ ಪುಟದಿಂದ)** ಪಾಸಿಟಿವಿಟಿ ರೇಟ್ ಶೇ. 1ಕ್ಕಿಂತ ಕಡಿಮೆ ಇದೆ. ಈ ಮೂಲಕ ಬೀದರ್ ಜಿಲ್ಲೆ ಇಡೀ ರಾಜ್ಯಕ್ಕೆ ಮಾದರಿಯಾಗಿದೆ.


ಮಹಾರಾಷ್ಟ್ರ, ದೆಹಲಿ, ಹರಿಯಾಣ ಸೇರಿದಂತೆ ದೇಶದ ಐದು ರಾಜ್ಯಗಳಲ್ಲಿ ಹಂತ ಹಂತವಾಗಿ ಲಾಕ್‌ಡೌನ್ ಅನ್ನು ಅಲ್ಲಿನ ಸರ್ಕಾರಗಳು ತೆರವುಗೊಳಿಸಿವೆ. ಇದೇ ಮಾದ ರಿಯನ್ನು ರಾಜ್ಯದಲ್ಲೂ ಅಳವಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಸರ್ಕಾರ ಐದು ಹಂತಗಳಲ್ಲಿ ಲಾಕ್‌ಡೌನ್ ತೆರವುಗೊಳಿಸಲಿದೆ.

ಯಾವ ಜಿಲ್ಲೆಯಲ್ಲಿ ಶೇ.5ಕ್ಕಿಂತಲೂ ಪಾಸಿಟಿವಿಟಿ ದರ ಕಡಿಮೆ ಇದೆಯೋ ಅಂತಹ ಜಿಲ್ಲೆಗಳಲ್ಲಿ ಶೇ.50ರಷ್ಟು ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡುವ ಸಾಧ್ಯತೆ ಇದೆ. ಶೇ.5 ರಿಂದ ಶೇ.7, ಶೇ.7 ರಿಂದ ಶೇ.10ರಷ್ಟು ಪಾಸಿಟಿವಿಟಿ ದರ ಇರುವ ಜಿಲ್ಲೆಗಳಲ್ಲಿ ಶೇ.30ರಷ್ಟು ಚಟುವಟಿಕೆಗಳಿಗೆ ಅನುಮತಿ ಸಿಗಲಿದೆ.

ಯಾವ ಜಿಲ್ಲೆಗಳಲ್ಲಿ ಪಾಸಿಟಿವಿಟಿ ದರ ಶೇ.10 ಕ್ಕಿಂತಲೂ ಹೆಚ್ಚಿದೆಯೋ ಅಂತಹ ಜಿಲ್ಲೆಗಳಲ್ಲಿ ಈಗಿರುವ ಸ್ಥಿತಿಯೇ ಯಥಾಸ್ಥಿತಿ ಮುಂದುವರಿಯಲಿದೆ. ಅಂದರೆ ಈ ಜಿಲ್ಲೆಗಳಲ್ಲಿ ವಿಧಿಸಿರುವ ಲಾಕ್‌ಡೌನ್‌ನಲ್ಲಿ ಯಾವುದೇ ರೀತಿಯ ಬದಲಾವಣೆಗಳು ಇರುವುದಿಲ್ಲ.


॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ ತಾ. ಆವರಗೆರೆ ಗ್ರಾಮದ ವಾಸಿ
**ಹಾಲುವರ್ತಿ ಶ್ರೀಮತಿ ಸುಧಾ ಶ್ರೀ ಹೆಚ್. ಕರಿಯಪ್ಪ ಮತ್ತು ಹಾಲುವರ್ತಿ ಸಹೋದರರು ಹಾಗೂ ಮಕ್ಕಳು** ಮಾಡುವ ವಿಜ್ಞಾಪನೆಗಳು.
ದಿನಾಂಕ 3.06.2021ರ ಗುರುವಾರ ಮಧ್ಯಾಹ್ನ 1.05ಕ್ಕೆ ನಮ್ಮ ಅಣ್ಣನವರಾದ

**ಹಾಲುವರ್ತಿ ಶ್ರೀ ಎ.ಹೆಚ್. ಆಂಜನೇಯ**

(ಹಾಲುವರ್ತಿ ದಿ.ಶ್ರೀಮತಿ ಗೌರಮ್ಮ ದಿ.ಶ್ರೀ ಅಜ್ಜಪ್ಪ ಇವರ ಹಿರಿಯ ಮಗ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ ಯನ್ನು**

ದಿನಾಂಕ 11.06.2021ನೇ ಶುಕ್ರವಾರ ಬೆಳಗ್ಗೆ 10 ಗಂಟೆಗೆ "**ಆವರಗೆರೆ ಗ್ರಾಮದ ಮೃತರ (ತೋಟದ ಮನೆಯಲ್ಲಿ) ಸ್ವಗೃಹದಲ್ಲಿ**" ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಲಿಂಗೈಕ್ಯರ ಧರ್ಮಪತ್ನಿ ಶ್ರೀಮತಿ ಜಯಮ್ಮ ಆಂಜನೇಯ ಮತ್ತು ಮಕ್ಕಳು, ಲಿಂಗೈಕ್ಯರ ಸಹೋದರ ಹೆಚ್. ಕರಿಯಪ್ಪ ಶ್ರೀಮತಿ ಸುಧಾ ಮತ್ತು ಮಕ್ಕಳು,ಲಿಂಗೈಕ್ಯರ ಸಹೋದರಿಯರು, ಮಕ್ಕಳು, ಅಳಿಯಂದಿರು ಹಾಲುವರ್ತಿ ವಂಶಸ್ಥರು ಆವರಗೆರೆ ಹಾಗೂ ಬಂಧು-ಮಿತ್ರರು.**


## ನರಸಿಂಹರಾಜು ಶೆಟ್ಟಿ ನಿಧನ



ದಾವಣಗೆರೆ ರಿಂಗ್ ರಸ್ತೆ, ವಿನಾಯಕನಗರ 1ನೇ ಕ್ರಾಸ್ ವಾಸಿ ನರಸಿಂಹರಾಜು ಶೆಟ್ಟಿ (55) ಅವರು ದಿನಾಂಕ 8-6-2021ರ ಮಂಗಳವಾರ ರಾತ್ರಿ 11-30ರ ಸುಮಾರು ನಿಧನರಾದರು. ತಾಯಿ, ಪತ್ನಿ, ಇಬ್ಬರು ಪುತ್ರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿನಾಂಕ 9-6-2021ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ಬೈಪಾಸ್ ಹತ್ತಿರದ ಗ್ಲಾಸ್ ಹೌಸ್ ಸಮೀಪವಿರುವ ರುದ್ರಭೂಮಿಯಲ್ಲಿ ನೆರವೇರಿತು.

## ಕಲಪನಹಳ್ಳಿ ಕೆ.ಎಂ. ಬಸವರಾಜಪ್ಪ (ಸೊಸೈಟಿ ಬಸಣ್ಣ) ನಿಧನ



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ ದುರ್ಗಾಂಬಿಕ ಸ್ಕೂಲ್ ಹಿಂಭಾಗದ ವಾಸಿ ಬಿ. ಕಲಪನಹಳ್ಳಿಯ ಕೆ.ಎಂ. ಬಸವರಾಜಪ್ಪ (ಸೊಸೈಟಿ ಬಸಣ್ಣ) (68) ಅವರು, ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.06.2021 ರ ಸಂಜೆ 6 ಗಂಟೆಗೆ ಬಿ. ಕಲಪನಹಳ್ಳಿ ಗ್ರಾಮದಲ್ಲಿ ನೆರವೇರಿತು.

# ವಹಿವಾಟು ಸಾಮಾನ್ಯ

**(1ನೇ ಪುಟದಿಂದ)** ಎಂದು ಹಲ ವಾರು ವರ್ತಕರು ತಿಳಿಸಿದ್ದಾರೆ.

ಅನಿಶ್ಚಿತತೆ ಹಿನ್ನೆಲೆಯಲ್ಲಿ ಕೆಲವರು ಆತಂಕದಿಂದ ವಾರಕ್ಕೆ - ತಿಂಗಳಿಗಾಗುವಷ್ಟು ದಿನಸಿ ಖರೀದಿಸಿದ್ದಾರೆ. ಹೀಗಾಗಿ ಈಗ ದಿನಸಿ ಖರೀದಿಗೆ ಅಷ್ಟಾಗಿ ಒತ್ತ ಡವಿಲ್ಲ ಎಂದು ದಿನಸಿ ಅಂಗ ಡಿಯ ಉಮೇಶ್ ತಿಳಿಸಿದ್ದಾರೆ.

ಲಾಕ್‌ಡೌನ್ ಹಿನ್ನೆಲೆಯಲ್ಲಿ ದುಡಿಮೆಯೂ ಕಡಿಮೆ ಇದೆ. ಇದೂ ಸಹ ಮಾರುಕಟ್ಟೆಯಲ್ಲಿ ಖರೀದಿ ಉತ್ಸಾಹ ಕಡಿಮೆ ಆಗಲು ಕಾರಣವಾಗಿದೆ ಎಂಬ ಅಭಿಪ್ರಾಯವೂ ಕೇಳಿ ಬಂದಿದೆ.

# ಮಹಿಳಾ ಪೇದೆಗೆ ಪೊಲೀಸ್ ಇಲಾಖೆಯಿಂದ ಶ್ರದ್ಧಾಂಜಲಿ



ಹೊನ್ನಾಳಿ, ಜೂ.9- ಇಲ್ಲಿನ ಪೊಲೀಸ್ ಠಾಣೆಯ ಮಹಿಳಾ ಪೇದೆಯಾದ ಹೆಚ್.ಎನ್.ಚಂದ್ರಕಲಾ ಇವರು ಕೊರೊನಾ ಹಿನ್ನಲೆಯಲ್ಲಿ ನಿಧನ ಹೊಂದಿದ್ದು, ಠಾಣೆಯಲ್ಲಿಂದು ಸಂಜೆ ಮೇಣದ ಬತ್ತಿ ಹಚ್ಚಿ, ಶ್ರದ್ಧಾಂಜಲಿ ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಬಸವರಾಜ್ ಕೋಟೂರ, ಸಿಪಿಐ ದೇವರಾಜ್ ಸಭೆಯಲ್ಲಿ ಮಾತನಾಡಿ ದರು. ಸಬ್‌ಇನ್‌ಸ್ಪೆಕ್ಟರ್ ಬಸವರಾಜ್ ಬಿರಾದಾರ್, ಎಎಸ್‌ಐಗಳಾದ ಮಾಲತೇಶ್, ಪರಶುರಾಮ್, ಚಂದ್ರು, ಮಹಿಳಾ ಪೇದೆಯ ಪತಿ ಭೋಜರಾಜ ಉಪಸ್ಥಿತರಿದ್ದರು.


ದೀಟೂರು ಏತನೀರಾವರಿ ಯೋಜನೆಯ ಪೈಪ್ ಗಳ ಪರಿಶೀಲನೆ.

# ರಾಜಕೀಯ ಚತುರ ಕೆ.ಬಿ. ಕಲ್ಲೇರುದ್ರೇಶ್ ಸಮಾಜ ಸೇವೆಯಲ್ಲೂ ಮುಂದು....



✍ ಬಿ.ಪಿ. ಸುಭಾನ್

ದಾವಣಗೆರೆ ಜಿಲ್ಲೆಯ ರಾಜಕಾರಣಿಗಳಲ್ಲಿ ವಿಶಿಷ್ಟ ಹಾಗೂ ಚತುರ ರಾಜಕಾರಣಿ ಎಂದೇ ಗುರುತಿಸಿಕೊಂಡಿರುವ.ಕೆ.ಬಿ. ಕಲ್ಲೇರುದ್ರೇಶ್ ಪ್ರಸ್ತುತ ಕೊರಾನಾ ಮಹಾಮಾರಿಯ ಸಂದರ್ಭದಲ್ಲಿ ಸಮಾಜ ಸೇವೆಗೆ ಮುಂದಾಗಿರುವುದು ವಿಶೇಷ ಸಂಗತಿ.

ಸದಾ ರಾಜಕೀಯ ಜಂಜಾಟಗಳಿಂದ ಗಮನ ಸೆಳೆದಿದ್ದ ಅವರು ಪ್ರಸ್ತುತ ಕೊರೊನಾ ಸಂದರ್ಭದಲ್ಲಿ ಜನರಿಗೆ ನೆರವಾಗುವ ಮೂಲಕ ಗಮನ ಸೆಳೆದಿದ್ದಾರೆ.

ಪ್ರಸ್ತುತ ಜಾತ್ಯತೀತ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಕಲ್ಲೇರುದ್ರೇಶ್ ಜೆಡಿಎಸ್ ಧುರೀಣರಾದ ಶ್ರೀ ಹೆಚ್ ಡಿ. ದೇವೇಗೌಡ ಹಾಗೂ ಎಚ್. ಡಿ. ಕುಮಾರಸ್ವಾಮಿ ರೇವಣ್ಣ ಅವರುಗಳ ನಿಕಟವರ್ತಿ ಎಂದು ಗುರುತಿಸಿಕೊಂಡಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಜೆಪಿ ಮೂವ್‌ಮೆಂಟ್ (ಚಳುವಳಿ) ಮುಂಚೂಣಿ, ಗೋಕಾಕ್ ಚಳುವಳಿಯಲ್ಲಿ ಭಾಗಿಯಾಗಿ ರಾಜಕೀಯ ಆಸಕ್ತಿ ಬೆಳೆಸಿಕೊಂಡ ಅವರು, 1986ರಲ್ಲಿ ಅವಿಭಜಿತ ಚಿತ್ರದುರ್ಗ ಜಿಲ್ಲಾ ಪರಿಷತ್ ಗೆ ಬಿದರಕೆರೆ ಕ್ಷೇತ್ರದಿಂದ ಸ್ಪರ್ಧಿಸಿ ಜಯ ಗಳಿಸಿದರು. ರಾಜ್ಯದಲ್ಲಿಯೇ ಅತಿ ಕಿರಿಯ ಜಿಲ್ಲಾ ಪರಿಷತ್ ಸದಸ್ಯರಲ್ಲಿ ಇವರು ಒಬ್ಬರಾಗಿ ಗಮನ ಸೆಳೆದಿದ್ದರು. ನಂತರ 1989 ರಲ್ಲಿ ಜೆಡಿಎಸ್ ಪಕ್ಷದಿಂದ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿ ಸೋಲು ಅನುಭವಿಸಿದರು. ನಂತರ 2009 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿಯೂ ಸಹ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಪರಾಭವ ಹೊಂದಿದರು.

ಸದಾ ಒಂದಿಲ್ಲ ಒಂದು ಜನಪರ ವಿಷಯಗಳಲ್ಲಿ ಹೋರಾಟಕ್ಕೆ ನಿಲ್ಲುವ ಕಲೆ ರುದ್ರೇಶ್ ಅವರು 1986 ರಲ್ಲಿಯೇ ಜಿಲ್ಲಾ ಪರಿಷತ್ ನಲ್ಲಿ ಅಪ್ಪರ್ ಭದ್ರಾ ಯೋಜನೆಯ ಜಾರಿಯ ಬಗ್ಗೆ ಖಾಸಗಿ ವಿಷಯ ಮಂಡನೆ ಮಾಡಿ ಅಪ್ಪರ್ ಭದ್ರಾ ಯೋಜನೆ ಜಾರಿಗೆ ಒತ್ತಾಯಿಸಿದ್ದರು. ನಂತರ 22 ಕೆರೆ ತುಂಬಿಸುವ ಯೋಜನೆ ಹೋರಾಟ ಹಾಗೂ ತಾಲೂಕಿನ ಭದ್ರಾ ಮೇಲ್ದಂಡೆ ಯೋಜನೆ ಹೋರಾಟದಲ್ಲಿಯೂ ಸಹ ಸಕ್ರಿಯವಾಗಿ ಭಾಗವಹಿಸುವ ಮೂಲಕ ತಮ್ಮತಮ್ಮ ಸಾಮಾಜಿಕ ಹೋರಾಟದ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

ಪ್ರಸ್ತುತ ನಡೆಯುತ್ತಿರುವ 53 ಕೆರೆ ತುಂಬಿಸುವ ಯೋಜನೆಯ ಕಾಮಗಾರಿಯ ಬಗ್ಗೆ ಜನರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವ ಕೆಲಸದಲ್ಲಿ ಮುಂಚೂಣಿಯಲ್ಲಿದ್ದಾರೆ. ಯಾವುದೇ ಒಂದು ಯೋಜನೆ ಯಶಸ್ವಿ ಅನುಷ್ಠಾನವಾಗಲು ಹಾಗೂ ಜನರಿಗೆ ಸಮಯಕ್ಕೆ ಸರಿಯಾಗಿ ಅದರ ಪ್ರತಿಫಲ ದೊರೆಯುವಂತಾಗಲು ಯೋಜನೆಯು ಸಮರ್ಪಕವಾಗಿ ಮತ್ತು ಗುಣಮಟ್ಟದಿಂದ ಆಗಬೇಕು ಎನ್ನುವುದು ಅವರ ಒತ್ತಾಸೆ... ಈ ಹಿನ್ನೆಲೆಯಲ್ಲಿ ಯೋಜನೆಯ ಮಾಹಿತಿ ಹಾಗೂ ಅದರ ಕಾರ್ಯ ರೂಪುರೇಷೆಗಳ ಬಗ್ಗೆ ಕರಪತ್ರಗಳನ್ನು ಮುದ್ರಿಸಿ ಹಳ್ಳಿಹಳ್ಳಿಗೂ ಸುತ್ತಿ ಮಾಹಿತಿ ನೀಡಿ ಕ್ಷೇತ್ರದ ಜನರ ಗಮನ ಸೆಳೆದಿದ್ದಾರೆ.

ಯಾವುದೇ ಹೋರಾಟಕ್ಕೆ ತಮ್ಮದೇ ಸ್ವಂತ ಜೇಬಿನಿಂದ ಹಣ ಖರ್ಚು ಮಾಡಿಕೊಂಡು ಜನಪರ ಕೆಲಸಗಳಲ್ಲಿ ತೊಡಗಿಕೊಂಡಿರುವ ಕಲ್ಲೇರುದ್ರೇಶ್ ಅವರು ಸಮಾಜ ಸೇವೆ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ.

ಅಕ್ರಮ ಗಣಿಗಾರಿಕೆ ಬಗ್ಗೆಯೂ ಸಹ ಹೋರಾಟ ನಡೆಸಿದ್ದಾರೆ. ಇವರು ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವಂತೆ ಮಾಡಿದ್ದಾರೆ.

ಜಗಳೂರು ಕ್ಷೇತ್ರದ ಬಹುನಿರೀಕ್ಷಿತ ಅಪ್ಪರ್ ಭದ್ರಾ ಮೇಲ್ದಂಡೆ ಯೋಜನೆ ಜಾರಿಯ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಕಲ್ಲೇರುದ್ರೇಶ್ ಅವರನ್ನು ರಾಜ್ಯ ಸರ್ಕಾರ ನೇಮಿಸಿದ ಮೂವರು ತಜ್ಞರ ಸಮಿತಿಯಲ್ಲಿ ಇವರು ಸಹ ಒಬ್ಬ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ರಾಜ್ಯ ಸರಕಾರ ಹಾಗೂ ಕೇಂದ್ರ ಸರ್ಕಾರದ ಬೆಳೆ ವಿಮೆ ಯೋಜನೆಯಲ್ಲಿ ರೈತರಿಗೆ ಬೆಳೆ ಬೆಳೆ ವಿಮೆ ಹಣ ಬರದೆ ತೊಂದರೆ ಅನುಭವಿಸಿದ ನೂರಾರು ಜನರನ್ನು ಒಗ್ಗೂಡಿಸಿಕೊಂಡು ಅವರ ಕಷ್ಟವನ್ನು ಕೇಳಿ, ಅದರ ಪರಿಹಾರಕ್ಕಾಗಿ ಕಲ್ಲೇರುದ್ರೇಶ್ ಪ್ರಯತ್ನಿಸಿರುವುದು ವಿಶೇಷ.

ಖಾಸಗಿ ಕಂಪನಿಗಳು ಬೆಳೆ ವಿಮೆ ನೀಡದೆ ರೈತರನ್ನು ಸತಾಯಿಸುತ್ತಿರುವ ಸಂದರ್ಭದಲ್ಲಿ ಮಾನ್ಯ ಮಾಜಿ ಪ್ರಧಾನಿ ದೇವೇಗೌಡರಿಂದ ಪತ್ರ ಮುಖೇನ ಒತ್ತಡ ಹಾಕಿ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಹಣ ತಲುಪಿಸುವಲ್ಲಿ ಕಲ್ಲೇರುದ್ರೇಶ್ ಅವರ ಪಾತ್ರವನ್ನು ರೈತರು ಪ್ರಶಂಸಿಸುತ್ತಾರೆ.

ರೈತರಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಇದ್ದರೂ ಸಹ ತಕ್ಷಣ ಅವರ ನೆರವಿಗೆ ಧಾವಿಸುವುದು ಇವರ ಒಂದು ವಿಶೇಷ ಗುಣ. ರೈತರ ಜಮೀನಿನ ಟ್ರಾನ್ಸ್‌ಫಾರ್ಮರ್ ಸುಟ್ಟು ತೊಂದರೆ ಅನುಭವಿಸುವ ರೈತರ ಗೋಳಿನ ಬಗ್ಗೆ ಅಧಿಕಾರಿಗಳ ಗಮನ ಸೆಳೆದು ಅವರಿಗೆ ತಕ್ಷಣ ನೆರವಾಗುತ್ತಾರೆ.

ಸ್ವತಃ ಅವರೊಬ್ಬ ಪ್ರಗತಿಪರ ರೈತ ಎಂದು ಗುರುತಿಸಿಕೊಂಡಿರುವ ಅವರು ತೋಟಗಾರಿಕೆ ಬೆಳೆಯಲ್ಲಿ ವಿಶೇಷ ಪರಿಣಿತಿ ಹೊಂದಿದ್ದಾರೆ. ತೋಟಗಾರಿಕೆ ಬೆಳೆಯ ವಿಷಯದಲ್ಲಿ ಸರ್ಕಾರದ ವತಿಯಿಂದ ಇಸ್ರೇಲ್ ದೇಶಕ್ಕೆ ಅಧ್ಯಯನ ಪ್ರವಾಸ ಮುಗಿಸಿದ್ದಾರೆ. ತರಳಬಾಳು ಅಭಿವೃದ್ಧಿ ಸಂಸ್ಥೆ, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ದಾವಣಗೆರೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಕೃಷಿ ಚಟುವಟಿಕೆ, ಮುಂಗಾರು ಮಳೆ ಬಿತ್ತನೆ ಕಾರ್ಯ ಹಾಗೂ ಕೃಷಿ ಚಟುವಟಿಕೆಯಲ್ಲಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಧಿಕೃತವಾಗಿ ಮಾತನಾಡುವ ಕಲ್ಲೇರುದ್ರೇಶ್ ತಾನೊಬ್ಬ ಮಣ್ಣಿನ ಮಗ ಎಂಬುದನ್ನು ನೆನಪಿಸಿಕೊಳ್ಳುತ್ತಾರೆ.

1993 ರ ತರಳಬಾಳು ಹುಣ್ಣಿಮೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು, 2018 ರ ತರಳಬಾಳು ಹುಣ್ಣಿಮೆಯ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯರ ಸ್ವಾಮೀಜಿಗಳ ಮೆಚ್ಚುಗೆ ಗಳಿಸಿದ್ದಾರೆ.

ಈ ವರ್ಷ ಕೊರೊನಾ ಎರಡನೇ ಅಲೆ ಆರಂಭವಾದಾಗಿನಿಂದ ಸೋಂಕಿತರ ನೆರವಿಗೆ ಧಾವಿಸಿರುವ ಕಲ್ಲೇರುದ್ರೇಶ್ ಅವರು, ಬಹುಮುಖ್ಯವಾಗಿ ಗ್ರಾಮೀಣ ಪ್ರದೇಶದ ಸೋಂಕಿತರಿಗೆ ಮಾಹಿತಿ, ಮಾರ್ಗದರ್ಶನ ನೀಡುವಲ್ಲಿ ಹಾಗೂ ಅವರಿಗೆ ಆಸ್ಪತ್ರೆ ಮತ್ತು ಕೋವಿಡ್ ಕೇರ್ ಸೆಂಟರ್ ನ ಮಾಹಿತಿ ಮಾರ್ಗದರ್ಶನ ನೀಡುವ ಮೂಲಕ ಜನರಿಗೆ ಸ್ಪಂದಿಸುತ್ತಿದ್ದಾರೆ.



ದಿನಾಂಕ 18.05.2021ರಂದು ಜಗಳೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಆಕ್ಸಿಜನ್ ಸಮಸ್ಯೆ ಆದಾಗ ಆಸ್ಪತ್ರೆಯ ಡಾ.ನೀರಜ್ ಆಡಳಿತಾಧಿಕಾರಿಗಳ ಜೊತೆಗೂಡಿ ಹರಿಹರದ ಸದರನ್ ಆಕ್ಸಿಜನ್ ಲಿಮಿಟೆಡ್ ನಲ್ಲಿ ತುರ್ತಾಗಿ 13

ಜಂಬೋ ಸಿಲಿಂಡರ್‌ಗಳನ್ನು ತೆಗೆದುಕೊಂಡುಬಂದು ರೋಗಿಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಯಿತು. ಇವರ ಸಮಯೋಚಿತ ಕಾರ್ಯಕ್ಕೆ ಸ್ವತಃ ಕ್ಷೇತ್ರದ ಶಾಸಕ ಎಸ್. ವಿ. ರಾಮಚಂದ್ರ ಅವರು ಸಹ ಮೆಚ್ಚುಗೆ ಸೂಚಿಸಿದ್ದಾರೆ.



- 20.07.1961 ಜನನ
- ಪ್ರಾಥಮಿಕ ಶಾಲೆ-ಮೆದಿಕೇರನಹಳ್ಳಿ, ಹೈಸ್ಕೂಲ್ - ಸಿರಿಗೆರೆ
- ಪಿಯುಸಿ - ಜಗಳೂರು (ನಾಲಂದ) ಪದವಿ ಪೂರ್ವ ಕಾಲೇಜು.
- ಬಿ.ಎಸ್ಸಿ. ಸರ್ಕಾರಿ ಕಾಲೇಜ್ ಸಿಟಿಎ ಚಿತ್ರದುರ್ಗ.
- ಎಲ್‌ಎಲ್‌ಬಿ - ಬೆಂಗಳೂರು.
- KAR-26/88m ಬಾರ್ ಕೌನ್ಸಿಲ್ ನೋಂದಣಿ
- ವಿದ್ಯಾರ್ಥಿ ದೆಸೆಯಲ್ಲಿ ಜೆ.ಪಿ. ಮೂವ್‌ಮೆಂಟ್ಸ್‌ನಲ್ಲಿ ಮುಂಚೂಣಿ
- ಗೋಕಾಕ್ ಚಳುವಳಿಯಲ್ಲಿ ಭಾಗಿ (ಚಿತ್ರದುರ್ಗ)
- ಕಾವೇರಿ-ಕೃಷ್ಣ ನದಿ ನೀರಿನ ಹಂಚಿಕೆಯಲ್ಲಿ ಭಾಗಿ
- ಜಗಳೂರು - ಗ್ರಾಮೀಣ (ಪಿಎಲ್‌ಡಿ) ಬ್ಯಾಂಕ್ 1980ರಲ್ಲಿ ಸ್ಪರ್ಧೆ.
- 1986 ಅವಿಭಾಜ್ಯ ಜಿಲ್ಲಾ ಪರಿಷತ್ ಬಿದರಕೆರೆ ಕ್ಷೇತ್ರದಿಂದ ಆಯ್ಕೆ, ರಾಜ್ಯದಲ್ಲಿ ಅತ್ಯಂತ ಕಿರಿಯ ಸದಸ್ಯರಾಗಿದ್ದರು.
- 1989 ರಲ್ಲಿ ಜೆಡಿಎಸ್‌ನಿಂದ ಎಂ.ಎಲ್.ಎ. ಸ್ಪರ್ಧೆ
- 2009ರಲ್ಲಿ ಎಂ.ಪಿ. ಅಭ್ಯರ್ಥಿ
- 1988 ರಿಂದ 5 ವರ್ಷ ಚಿತ್ರದುರ್ಗ ಜಿಲ್ಲಾ ಜೆಡಿಎಸ್ ಯೂತ್ ಅಧ್ಯಕ್ಷ
- 1995 ರಿಂದ ಜೆಡಿಎಸ್ ತಾಲ್ಲೂಕು ಅಧ್ಯಕ್ಷರು
- 2017 ರಿಂದ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ
- ಕಾಂಗ್ರೆಸ್ ಸರ್ಕಾರದಲ್ಲಿ ಅಪ್ಪರ್ ಭದ್ರಾ ಯೋಜನೆಯಲ್ಲಿ ತಜ್ಞರ ಸಮಿತಿ ಸದಸ್ಯರು
- ಜಿಲ್ಲಾ ಪರಿಷತ್‌ನಲ್ಲಿ ಅಪ್ಪರ್ ಭದ್ರಾ ಜಾರಿ ಬಗ್ಗೆ ಖಾಸಗಿ ವಿಷಯ ಮಂಡನೆ, ಆತ್ಮಸಾಕ್ಷಿ ಮತಯಾಚನೆ, ಅಪ್ಪರ್ ಭದ್ರಾ ಜಾರಿಗೆ ಬಹುಮತ.
- 2015ರಲ್ಲಿ ಶ್ರವಣ ಬೆಳಗೊಳದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನಿಂದ ರಾಜ್ಯಮಟ್ಟದ ಪುರಸ್ಕಾರ.
- ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ನಿರ್ದೇಶಕರು, ತೋಟಗಾರಿಕೆ ಬಗ್ಗೆ ವಿಶೇಷ ಅಧ್ಯಯನದ ಬಗ್ಗೆ ಇಸ್ರೇಲ್ ಪ್ರವಾಸ.
- ಅಕ್ರಮ ಗಣಿಗಾರಿಕೆ ಬಗ್ಗೆ ಹೋರಾಟ ನಡೆಸಿದ್ದರ ಫಲವಾಗಿ ಸರ್ಕಾರಕ್ಕೆ ಆದಾಯ ಬಂದಿದೆ.
- ಬಾಳೆ ಬೆಳೆಯಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನ
- ಲಿಂಗನಮಕ್ಕಿ ನೀರನ್ನು ಮಾರಿ ಕಣಿವೆ ತರುವ ಬಗ್ಗೆ ಸರ್ಕಾರಕ್ಕೆ ಕೋರಿಕೆ, ಮನವಿ ಸಲ್ಲಿಕೆ.
- 1993ರಲ್ಲಿ ತರಳಬಾಳು ಹುಣ್ಣಿಮೆಯಲ್ಲಿ ಭಾಗಿ.
- 2018ರಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರು (ತರಳಬಾಳು ಹುಣ್ಣಿಮೆ)
- ಜಗಳೂರು ಕುಡಿಯುವ ನೀರಿನ ಹೋರಾಟದಲ್ಲಿ ಭಾಗಿ.
- 22 ಕೆರೆ ನೀರಾವರಿ ಹೋರಾಟದಲ್ಲಿ ಸಕ್ರಿಯ ಭಾಗಿ.



ಜಗಳೂರಿನ ಆಸ್ಪತ್ರೆಗೆ ಆಕ್ಸಿಜನ್ ಕೊರತೆ ಆಗದಂತೆ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ, ಸಹಾಯಕ ಕಮೀಷನರ್ ಜೊತೆಗೆ ಕಲ್ಲೇರುದ್ರೇಶ್ ಅವರು ಚರ್ಚಿಸಿರುವುದು.


ದೇವಿಕೆರೆ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಇಲ್ಲದ ಪ್ರಯುಕ್ತ ಗ್ರಾಮಕ್ಕೆ ತೆರಳಿ ಲಸಿಕೆ ನೀಡಲು ಅನುಮತಿ ನೀಡಿದ ಜಿಲ್ಲಾಧಿಕಾರಿಗಳಿಗೆ ಕಲ್ಲೇರುದ್ರೇಶ್ ಅಭಿನಂದಿಸುವುದು.


ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ ಹೋರಾಟ ಸಮಿತಿ ಸದಸ್ಯರೊಂದಿಗೆ ಸನ್ಮಾನ್ಯ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಕಲ್ಲೇರುದ್ರೇಶ್.


ಜಗಳೂರು ಕ್ಷೇತ್ರದ 57 ಕೆರೆಗಳಿಗೆ ನೀರು ತುಂಬುವ ದೀಟೂರು ಏತ ನೀರಾವರಿ ಯೋಜನೆಯ ಲೋಪಗಳ ಬಗ್ಗೆ ಸಚಿವರಾದ ಭೈರತಿ ಬಸವರಾಜು ಅವರ ಸಮ್ಮುಖದಲ್ಲಿ ಈ ಯೋಜನೆಯ ಲೋಪಗಳ ಮನವರಿಕೆ.


ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಸನ್ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸಭೆಯಲ್ಲಿ ಸಂಸದರ ಮತ್ತು ಶಾಸಕರೊಂದಿಗೆ ಕಲ್ಲೇರುದ್ರೇಶ್ ಭಾಗವಹಿಸಿದ್ದರು.


ಶ್ರೀಮದ್ ಉಜ್ಜಿನಿ ಜಗದ್ಗುರುಗಳೊಂದಿಗೆ ಆತ್ಮೀಯ ಚರ್ಚೆಯಲ್ಲಿ ಕಲ್ಲೇರುದ್ರೇಶ್.

advt

# ಅರ್ಜಿಗೆ ಅರ್ಹತೆ ಕೊಡಿಸಿದ ಮೇಧಾವಿ ಪ್ರೊ. ಬಿ.ಜಿ.ಎನ್. ಸರ್

ಇತ್ತೀಚೆಗೆ ನಮ್ಮನ್ನು ಅಗಲಿದ. ಶ್ರೀ ಬಿ.ಜಿ. ನಾಗರಾಜ್ ರವರು 'ಬಿಜಿಎನ್' ಎಂದೇ ಚಿರಪರಿಚಿತರಾಗಿದ್ದರು. ನಗುಮೊಗದ, ಶಿಸ್ತಿನ ಸಿಪಾಯಿ, ಬಿ.ಜಿ.ಎನ್ ರವರ ಮಾತುಗಳು ಕೇಳುಗರ ಹೃದಯವನ್ನು ತಟ್ಟುತ್ತಿದ್ದವು. ತಾವು ಸ್ವಲ್ಪವೂ ನಗದೇ ಕೇಳುಗರಿಗೆ ಹೊಟ್ಟೆ ಹುಣ್ಣಾಗುವಷ್ಟು ನಗೆಗಡಲಿಗೆ ತಳ್ಳುವ ಅವರ ಮಾತುಗಳು ಹಾಸ್ಯಭರಿತವಾಗಿ, ಅಷ್ಟೇ ಅರ್ಥಪೂರ್ಣವೂ ಆಗಿರುತ್ತಿದ್ದವು. ಕೇಳುಗರ ಕೇವಲ ಹೃದಯವಲ್ಲ, ಬುದ್ಧಿಯೂ ಗಂಭೀರವಾಗಿ ಚಿಂತನೆ ಮಾಡುವಂತೆ ಪ್ರೇರಣೆ ಕೊಡುತ್ತಿದ್ದವು. ಅಪ್ರತಿಮ ವಾಗ್ಮಿಸರಳವಾಗಿ, ಪರಿಣಾಮಕಾರಿಯಾಗಿ ವಿಷಯ ಮಂಡನೆಯಲ್ಲಿ ಸಿದ್ಧ ಹಸ್ತರಾಗಿದ್ದರು.

ನನ್ನ ಜೀವನದಲ್ಲಿ ಮರೆಯಲಾಗದ ಎರಡು ಘಟನೆಗಳನ್ನು ದಾಖಲಿಸುವ ಮೂಲಕ ಬಿಜಿಎನ್ ಅವರಿಗೆ ನನ್ನ" ನುಡಿ ನಮನ " ವನ್ನು ಅರ್ಪಿಸಲು ಇಚ್ಚಿಸುತ್ತೇನೆ.


1973 ರಲ್ಲಿ ಧಾರವಾಡದ ಕೆ.ಸಿ.ಡಿ. (ಕರ್ನಾಟಕ ಸೈನ್ಸ್ ಕಾಲೇಜ್) ನಲ್ಲಿ ಬಿ.ಎಸ್ಸಿ., ಪಾಸಾಗಿದ್ದು, ತಂದೆಯವರಿಗೆ ನನಗೆ 'ಡಾಕ್ಟರ್' ಮಾಡಿಸಬೇಕೆಂಬುದು ಅವರ ಬಹಳ ವರ್ಷಗಳ ಕನಸು.

ನಾನು 14 ನೇ ವಯಸ್ಸಿಗೆ ಎಸ್ಸೆಸ್ಸೆಲ್ಸಿ ಮಾಡಿ 15 ನೇ ವಯಸ್ಸಲ್ಲಿ ಪಿ.ಯು.ಸಿ.(ನಮ್ಮದೇ ಒಂದು ವರ್ಷದ ಪಿಯುಸಿ ಅಂತಿಮ ಬ್ಯಾಚ್,1969.) ಮಾಡಿದ ಪರಿಣಾಮವಾಗಿ ಎಂಬಿಬಿಎಸ್ ಗೆ ಸೇರಲು ವಯೋಮಾನ ಅಡ್ಡಿಯಾಯಿತು. ಹಾಗಾಗಿ ಕೆ.ಸಿ.ಡಿ.ಯಲ್ಲಿ ಓದು ಮುಂದುವರೆಸಿ, 1973 ರಲ್ಲಿ ಬಿ.ಎಸ್ಸಿ., ಪದವಿ ಪಡೆದೆ.( ಕೆಮಿಸ್ಟ್ರಿ ಮೇಜರ್ ಸಬ್ಜೆಕ್ಟ್ ಹಾಗೂ ಜೂವಾಲಜಿ ಮೈನರ್ ಸಬ್ಜೆಕ್ಟ್ ತೆಗೆದುಕೊಂಡಿದ್ದೆ. ಆಗ ಕರ್ನಾಟಕ ವಿಶ್ವವಿದ್ಯಾಲಯ ದಲ್ಲಿ ಮೇಜರ್ ಸಬ್ಜೆಕ್ಟ್ 300 ಮಾರ್ಕ್ಸ್ 3 ಪೇಪರ್ ಹಾಗೂ ಪ್ರಾಕ್ಟಿಕಲ್ 100 ಮತ್ತು ವೈವಾ 50 ಸೇರಿ 150 ಮಾರ್ಕ್. ಒಂದೇ ಮೈನರ್ ಸಬ್ಜೆಕ್ಟ್ ಇರುತ್ತಿತ್ತು. ಅದಕ್ಕೆ 100 ಮಾರ್ಕ್ಸ್ 1 ಪೇಪರ್ ಹಾಗೂ 50 ಪ್ರಾಕ್ಟಿಕಲ್ ಮಾರ್ಕ್ಸ್ ಇರುತ್ತಿತ್ತು. ಇಷ್ಟೊಂದು ವಿವರವಾಗಿ ಹೇಳಲು ಪ್ರಮುಖ ಕಾರಣವಿದೆ.)

ಬಿ ಎಸ್ಸಿ., ಪಾಸ್ ಮಾಡಿದ ನಂತರ ದಾವಣಗೆರೆಗೆ ಬಂದೆ. ನಮ್ಮ ತಂದೆಯವರು ಸಿರಿಗೆರೆ ತರಳಬಾಳು ಹಿರಿಯ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಪರಮ ಶಿಷ್ಯರಾಗಿದ್ದರು. ತಂದೆಯವರು ಪೂಜ್ಯರಲ್ಲಿ ನನ್ನ ಮೆಡಿಕಲ್ ಗೆ ಸೇರಿಸುವ ಬಗ್ಗೆ ವಿನಂತಿ ಮಾಡಿಕೊಂಡಿದ್ದು, ಗುರುಗಳು "ಆಗಲಿ, ಅರ್ಜಿ ಹಾಕಿ ಅದರ ವಿವರ ನಮಗೆ ಕೊಡಿರಿ ಸೀಟ್ ಕೊಡಿಸುತ್ತೇವೆ " ಎಂದು ಆಶೀರ್ವಾದ ಮಾಡಿದ್ದರು. ಹಾಗಾಗಿ ಅಪ್ಲಿಕೇಶನ್ ಹಾಕಲು ನಾನು ನಮ್ಮ ಹಿರಿಯ ಸಹೋದರ ಮೆಡಿಕಲ್ ಕಾಲೇಜಿಗೆ ಹೋದೆವು. ಅದೇ ವರ್ಷ ಸರ್ಕಾರ ನಿಯಮ ಬದಲಾವಣೆ ಮಾಡಿ, ಈ ಹಿಂದೆ ಇದ್ದ ಬಿ.ಎಸ್ಸಿ., ಪದವೀಧರರಿಗೆ ಫಸ್ಟ್ ಇಯರ್ ಬಿ.ಎಸ್ಸಿ., ಪಿ.ಸಿ ಬಿ. ಮಾರ್ಕ್ಸ್ 45% ರಿಂದ 50% ಗೆ ಏರಿಸಿದ್ದರು. ನನ್ನ ದೌರ್ಭಾಗ್ಯ, ,ಪಿಯುಸಿಯಲ್ಲಿ ಸೆಕೆಂಡ್ ಕ್ಲಾಸ್, ಬಿಎಸ್ಸಿ ಹೈಯರ್ ಸೆಕೆಂಡ್ ಕ್ಲಾಸ್ ಅದರಲ್ಲೂ ಕೆಮಿಸ್ಟ್ರಿ ಮೇಜರ್ ಸಬ್ಜೆಕ್ಟ್ ಅಲ್ಲಿ ಫಸ್ಟ್ ಕ್ಲಾಸ್ ಮಾರ್ಕ್ಸ್ ಬಂದಿತ್ತು. ಆದರೆ ಫಸ್ಟ್ ಇಯರ್ ಬಿ. ಎಸ್ಸಿ., 48 ಪರ್ಸೆಂಟ್ ಮಾರ್ಕ್ಸ್ ಇತ್ತು..!

ಹಾಗಾಗಿ ನಾನು ಮತ್ತು ನಮ್ಮ ಸಹೋದರ ಅರ್ಜಿ ಸಲ್ಲಿಸಲು ಹೋದಾಗ ಕಚೇರಿಯಲ್ಲಿ ಅರ್ಜಿಯನ್ನು ಸ್ವೀಕರಿಸಲಿಲ್ಲ. ವಾಪಸ್ ಕಳುಹಿಸಿದ್ದರು. ಈ ವಿಷಯವನ್ನು ತಂದೆಯವರಿಗೆ ತಿಳಿಸಿದಾಗ ಅವರಿಗೆ ತುಂಬಾ ಗೊಂದಲವಾಯಿತು. ಅವರು ಈ ವಿಷಯದ ಬಗ್ಗೆ ಬಿ ಜಿ ಎನ್ ಅವರ ಬಳಿ ಲೋಕಾರೂಢಿಯಲ್ಲಿ ಪ್ರಸ್ತಾಪಿಸಿ, "ಗುರುಗಳು ಸೀಟ್ ಕೊಡಿಸುವುದಾಗಿ ಹೇಳಿದ್ದಾರೆ ,ಆದರೆ ನಮ್ಮ ಹುಡುಗನ ಅರ್ಜಿ ಸ್ವೀಕೃತಿ ಆಗಿಲ್ಲ "ಎಂದು ಬೇಸರ ವ್ಯಕ್ತ ಮಾಡಿದ್ದಾರೆ. ಆಗ ಬಿಜಿಎನ್ ಅವರು ನಿಮ್ಮ ಹುಡುಗನನ್ನು ನನ್ನ ಬಳಿ ಕಳುಹಿಸಿರಿ ಎಂದು ತಿಳಿಸಿದ್ದಾರೆ. ಮಾರನೆಯ ದಿನ ಅವರ ಬಳಿ ನಾನು ಹೋದಾಗ ಅವರು ಎಲ್ಲ ವಿವರಗಳನ್ನು ಪಡೆದು ಮಾರ್ಕ್ಸ್ ಕಾರ್ಡ್ ನೋಡಿ 'ನಾಳೆಯ ದಿವಸ ಇದನ್ನೆಲ್ಲ ತೆಗೆದುಕೊಂಡು ಮೆಡಿಕಲ್ ಕಾಲೇಜಿನ ಆಫೀಸಿಗೆ ಬನ್ನಿರಿ 'ಎಂದು ಹೇಳಿದರು. ಅವರು ಹೇಳಿದ ಸಮಯಕ್ಕೆ ಸರಿಯಾಗಿ ನಾನು ಕಾಲೇಜಿನ ಕಚೇರಿಯ ಬಳಿ ಕಾಯುತ್ತಿದ್ದೆ. ಬಿಜಿಎನ್ ರವರು ತಮ್ಮ ಸ್ಕೂಟರ್ ಮೇಲೆ ಬಂದರು. ಆಫೀಸಿನ ಮ್ಯಾನೇಜರ್ ಅವರ ಬಳಿ ಕರೆದುಕೊಂಡು ಹೋದರು. ಆಗಿನ ಮ್ಯಾನೇಜರ್ ಅವರು ಬಿಜಿಎನ್ ರನ್ನು

ನೋಡುತ್ತಿದ್ದಂತೆಯೇ ಎದ್ದು ನಿಂತು ಗೌರವಿಸಿ, ಅವರು ಕುಳಿತ ನಂತರ ತಾವು ಕುಳಿತರು. ಬಿಜಿಎನ್ ಸಹಜವಾಗಿ ಮಾತನಾಡುತ್ತಾ 'ಈ ವರ್ಷ ನಿಯಮಾವಳಿ ಬದಲಾವಣೆ ಮಾಡಿದ್ದಾರೆಯೇ ' ಎಂದರು. ಆಗ ಮ್ಯಾನೇಜರ್ ಅವರು 'ಹೌದು ಸರ್, ಈ ವರ್ಷದಿಂದ ಪಿಸಿಬಿ ಸಬ್ಜೆಕ್ಟಿನ ಮಿನಿಮಮ್ ಪರ್ಸೆಂಟೇಜ್ 45%



ನಿಂದ 50% ಮಾಡಿದ್ದಾರೆ 'ಎಂದು ಹೇಳಿದರು. ಆಗ ಬಿಜಿಎನ್ ಅವರು ಬಿ.ಎಸ್ಸಿ.,ಪದವಿ ಮಾಡಿದವರಿಗೆ ನೀವು ಯಾವ ವರ್ಷದ ಮಾರ್ಕ್ಸ್ ನೋಡುತ್ತೀರಿ ಎಂದು ಕೇಳಿದಾಗ ಮ್ಯಾನೇಜರ್ ಅವರು ಫಸ್ಟ್ ಇಯರ್ ಬಿ.ಎಸ್ಸಿ., ಎಂದು ಹೇಳಿದರು. ಅದಕ್ಕೆ ಬಿಜಿಎನ್ ರವರು "ವಿದ್ಯಾರ್ಥಿ ಬಿ.ಎಸ್ಸಿ.,ಯಲ್ಲಿ ಕೆಮಿಸ್ಟ್ರಿ ಮೇಜರ್ ತೆಗೆದುಕೊಂಡು ಓದಿದ್ದಾನೆ. ಎಂದಾಗ ಪ್ರಥಮ ವರ್ಷದ ಬಿ.ಎಸ್ಸಿ., ವಿದ್ಯಾರ್ಥಿ ಓದಿದ ಕೆಮಿಸ್ಟ್ರಿ ಸಿಲಬಸ್ ಗಿಂತ ಇವನು ಎರಡು ವರ್ಷ ಹೆಚ್ಚು ವಿಷಯ ಓದಿ ತಿಳಿದುಕೊಂಡಿರುತ್ತಾನೆ. ಹಾಗಾಗಿ ನೀವು ಅರ್ಜಿಯನ್ನು ಪರಿಗಣಿಸುವಾಗ ಮೊದಲ ವರ್ಷದ ಬಿ.ಎಸ್ಸಿ., ಫಿಸಿಕ್ಸ್ ಮತ್ತು ಬಯಾಲಜಿ ಹಾಗೂ ಅಂತಿಮ ವರ್ಷದ ಕೆಮಿಸ್ಟ್ರಿ ಮಾರ್ಕ್ಸ್ ಪರಿಗಣಿಸಬೇಕಲ್ಲವೇ..? " ಎಂದರು. ಸರ್ ಅವರ ತರ್ಕಬದ್ಧ ವಾದಕ್ಕೆ ಮ್ಯಾನೇಜರ್ ಅವರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಅದರಲ್ಲೂ ಬಿಜಿಎನ್ ವಿಷಯ ಮಂಡನೆ ಮಾಡುತ್ತಿದ್ದಾರೆ. ಹಾಗಾಗಿ ಮ್ಯಾನೇಜರ್ ಅವರು "ಹೌದು ಸರ್ " ಎಂದರು. ಆಗ ಬಿಜಿಎನ್ ನನಗೆ ಮಾರ್ಕ್ಸ್ ಕಾರ್ಡ್ ಗಳನ್ನು ಕೊಡಿ ಎಂದರು. ಸಹಜವಾಗಿ ಫಿಸಿಕ್ಸ್ ಮತ್ತು ಬಯಾಲಜಿ ಮತ್ತು ಅಂತಿಮ ಬಿ ಎಸ್ಸಿ., ಕೆಮಿಸ್ಟ್ರಿಮಾರ್ಕ್ಸ್ (73%) ಇದ್ದು, ಸೇರಿಸಿದಾಗ ನನ್ನ ಮಾರ್ಕ್ಸ್ 60% ಕ್ಕಿಂತ ಹೆಚ್ಚಾಯಿತು..! ಈಗ ಅರ್ಜಿ ತೆಗೆದುಕೊಳ್ಳಿ ಎಂದು ಹೇಳಿ ಅರ್ಜಿ ಕೊಡಿಸಿ, ನನಗೆ 'ಅಕ್ನಾಲೆಡ್ಜ್ ಮೆಂಟ್ ' ಕೊಡಿಸಿದರು. ಹೊರಗೆ ಬಂದು ತಮ್ಮ ಸ್ಕೂಟರ್ ಸ್ಟಾರ್ಟ್ ಮಾಡುತ್ತಾ, 'ಸ್ವಾಮಿಯವರಿಗೆ ತಿಳಿಸಿ, ಅರ್ಜಿ ತೆಗೆದುಕೊಂಡಿದ್ದಾರೆ ' ಎಂದು ಹೇಳಿದರು. ನಾನು ಸರ್ ಅವರಿಗೆ ಕೃತಜ್ಞತೆಯಿಂದ ಕೈಮುಗಿದೆ. ನಂತರ ಸಿರಿಗೆರೆ ಗೆ ಹೋಗಿ ಪರಮಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿ ಗಳನ್ನು ಭೇಟಿ ಮಾಡಿ, ನನ್ನ ಅರ್ಜಿ ಸಂಖ್ಯೆ ವಿವರ ಪುಸ್ತಕದಲ್ಲಿ ಬರೆಸಿದೆ. ಆಗ ಪೂಜ್ಯರು ನನಗೆ ನಿಮ್ಮ ಅಪ್ಪಾರಿಗೆ ದುಡ್ಡು ಜೊತೆ ಮಾಡಿಕೊಳ್ಳಲು ಹೇಳು" ಎಂದರು.

ಆಗ 5000 ರೂ ಡೊನೇಷನ್ ಇತ್ತು ಹಾಗೂ 6 ತಿಂಗಳಿಗೆ 620 ರೂ. ಫೀಸ್ ಇತ್ತು. ಪೂಜ್ಯ ಶ್ರೀಗಳ ಆಶೀರ್ವಾದದಿಂದ ನನಗೆ ಎಂ. ಬಿ.,ಬಿ.ಎಸ್. ಸೀಟ್ ಆ ವರ್ಷ ಸಿಕ್ಕಿತು. ಒಂದು ವೇಳೆ ಬಿಜಿಎನ್ ರವರು ಅರ್ಜಿ ಸ್ವೀಕಾರ ವಾಗುವಂತೆ ಮಾಡದಿದ್ದರೆ, ಬಹುಶಃ" ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ "ಎಂಬಂತಾಗುತ್ತಿತ್ತು.

**ಇನ್ನೊಂದು ಘಟನೆ :** ನಾನು ಮುಂಬೈಯಲ್ಲಿ ಡಿ.ಜಿ.ಓ., ಮಾಡಿ ದಾವಣಗೆರೆಯ ಚಾಮರಾಜಪೇಟೆಯಲ್ಲಿ ಶ್ರೀ ಮೃತ್ಯುಂಜಯ ನರ್ಸಿಂಗ್ ಹೋಮ್ ಆರಂಭಿಸಿದೆ. ಆಗ ಒಂದು ದಿನ ನನ್ನ ಸೋದರ ಸಂಬಂಧಿ ಅವರ ಮಗನಿಗೆ ಕಾಲೇಜಿನಲ್ಲಿ ಬಿ.ಎಸ್ಸಿ., ಗೆ ಒಂದು ಸೀಟ್ ಕೊಡಿಸಿ ಎಂದರು. ಅವರ ಮಗ ಆನಗೋಡಿನ ಪಿಯು ಕಾಲೇಜಿನಲ್ಲಿ ಪಿಯುಸಿ ಮಾಡಿದ್ದರು. ಆಗ ಬಿ ಜಿ ಎನ್ ರವರು ಧ.ರಾ.ಮ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದರು. ನಾನು ಅವರಿಗೆ ಫೋನ್ ಮಾಡಿದಾಗ, ಮಾರನೆಯ ದಿನ ವಿದ್ಯಾರ್ಥಿಯನ್ನು ,ಅವರ ಪೋಷಕರನ್ನು ಕರೆದುಕೊಂಡು ಬರಲು ತಿಳಿಸಿದರು. ಅವರು ಹೇಳಿದ ಸಮಯಕ್ಕೆ ಸರಿಯಾಗಿ ಮಾರನೆಯ ದಿನ ಡಿ ಆರ್ ಎಂ ಕಾಲೇಜಿನ ಅವರ ಛೇಂಬರಿಗೆ ಹೋದೆವು. ಅದುವರೆಗೂ ನಾನು ಹುಡುಗನ ಮಾರ್ಕ್ಸ್ ಕಾರ್ಡ್ ನೋಡಿರಲಿಲ್ಲ. ಬಿಜಿಎನ್ ರವರು ಹುಡುಗನಿಗೆ ಮಾರ್ಕ್ಸ್ ಕಾರ್ಡ್ ಕೇಳಿದಾಗ, ಅವನು ಫೈಲ್ ಕೊಟ್ಟನು. ಅದರಲ್ಲಿ ಮಾರ್ಕ್ಸ್ ಕಾರ್ಡುಗಳ ಕಡತ ಇದ್ದು, ಪಿಯುಸಿಯನ್ನು ಪಾಸ್ ಮಾಡಲು ಅವನು 3 - 4 ಅಟೆಂಪ್ಟ್ ತೆಗೆದುಕೊಂಡಿದ್ದನು.ಫೈಲ್ ನೋಡಿದ ನಂತರ ಒಮ್ಮೆ ನನ್ನನ್ನು ನೋಡಿ, ನಂತರ ಹುಡುಗನಿಗೆ 'ನೀನು ಬಿ.ಎಸ್ಸಿ., ಏಕೆ ಓದಬೇಕು 'ಎಂದು ಕೇಳಿದರು. ಅದಕ್ಕೆ ಅವನು ನಂತರ ಎಂ.ಎಸ್ಸಿ., ಕೆಮಿಸ್ಟ್ರಿ ಮಾಡುತ್ತೇನೆ ಅಂದನು..! ನಂತರ ಏನು ಮಾಡುವೆ ಎಂದಾಗ, ಲೆಕ್ಚರರ್ ಆಗುತ್ತೇನೆ ಎಂದನು. ಬಿಜಿಎನ್ ರವರು ಅವನನ್ನು ಒಮ್ಮೆನೋಡಿ, ಅವನ ತಂದೆಗೆ ಹೇಳಿದರು "ಈ ಹುಡುಗ ಪಿಯುಸಿ ಪಾಸ್ ಮಾಡಲು 3-4 ಅಟೆಂಪ್ಟ್ ತೆಗೆದುಕೊಂಡಿದ್ದಾನೆ. ಹಾಗಿದ್ದಾಗ ಇವನಿಗೆ ಬಿ.ಎಸ್ಸಿ.ಕಷ್ಟ ಆಗುತ್ತದೆ. ಐದು ಕೆಜಿ ಭಾರ ಹೊರಲು ಆಗದ ಹುಡುಗನಿಗೆ 10 ಕೆಜಿ ಹೊರಿಸಿ ಓಡು ಎಂದರೆ ಸಾಧ್ಯವೇ..? ನಾವು ಯಾವಾಗಲೂ ನಮ್ಮ ಮಕ್ಕಳಿಗೆ ಏನು ಸಾಧ್ಯವೋ ಅದನ್ನೇ ಓದಿಸಬೇಕು. ಈಗ ಸ್ವಾಮಿಯವರು ಬಂದಿದ್ದಾರೆ ಅಂತ ಹೇಳಿ ಇವನಿಗೆ ನಾನು ಬಿ.ಎಸ್ಸಿ., ಗೆ ಅಡ್ಮಿಷನ್ ಕೊಟ್ಟರೆ, ಅದನ್ನು ಮುಗಿಸಲು 8-10 ವರ್ಷ ತೆಗೆದುಕೊಳ್ಳುತ್ತಾನೆ. ಪ್ರತಿದಿನ ಬೆಳಿಗ್ಗೆ ಹಳ್ಳಿಯಿಂದ ಕಾಲೇಜಿಗೆ ಬಂದು ಸಾಯಂಕಾಲ ಊರಿಗೆ ಬರುತ್ತಾನೆ. ನೀವು ನನ್ನ ಮಗ ಕಾಲೇಜಿನಲ್ಲಿ ಓದುತ್ತಿದ್ದಾನೆ ಎಂದು ಊರಲ್ಲೆಲ್ಲಾ ಹೇಳಿಕೊಂಡು ಓಡಾಡುತ್ತೀರಿ. ಆದರೆ 7-8 ವರ್ಷ ಆದನಂತರ ಇವನು ಬಿ.ಎಸ್ಸಿ., ಸರ್ಟಿಫಿಕೇಟ್ ತೆಗೆದುಕೊಂಡು ಬಂದು ನಿಮ್ಮ ಮುಂದೆ ನಿಲ್ಲುತ್ತಾನೆ. 'ಮುಂದೆ ಏನಪ್ಪಾ 'ಎಂದು ಕೇಳಿದಾಗ, 'ನೀವು ಹೇಗೆ ಹೇಳಿದರೆ ಹಾಗೆ ' ಎನ್ನುತ್ತಾನೆ. ಏನು ಮಾಡುವಿರಿ..? ಅದರ ಬದಲು ಈಗಲೇ ಸೂಕ್ತ ತೀರ್ಮಾನ ಮಾಡಿರಿ. ಸ್ಕೂಟರ್, ಮೋಟಾರ್ ಸೈಕಲ್ ಓಡಿಸುವ ರಸ್ತೆ ಬೇರೆ. ಕಾರು ಓಡಿಸುವ ರಸ್ತೆ ಬೇರೆ, ಸೈಕಲ್, ಚಕ್ಕಡಿ, ಓಡಿಸುವ ರಸ್ತೆಯೇ ಬೇರೆ. ನಾವು ನಮ್ಮ ಹುಡುಗನ ಶಕ್ತಿ ನೋಡಿ, ಅದಕ್ಕೆ ತಕ್ಕಂತೆ ಅವನಿಗೆ ಅವಕಾಶ ಮಾಡಿಕೊಡಬೇಕು. ಇವನಿಗೆ ಓದಿಸಬೇಕು ಎಂದಿದ್ದರೆ ಆರ್ಟ್ಸ್ ಗೆ ಕಳಿಸಿ. ಅಲ್ಲಿ ವಿಷಯಗಳು ಸೈನ್ಸ್ ಗಿಂತ ಸ್ವಲ್ಪ ಬೇರೆ ಇರುತ್ತದೆ. ಇನ್ನು ನೀವು ಒಪ್ಪುವುದಾದರೆ ಇವನಿಗೆ ನಿಮ್ಮ ತೋಟದಲ್ಲಿ ಕೆಲಸ ಮಾಡಲು ನಿಮ್ಮ ಜೊತೆಗೆ ಜೋಡಿಸಿಕೊಳ್ಳಿ. ನಾಲ್ಕಾರು ವರ್ಷದಲ್ಲಿ ಇವನು ನಿಮ್ಮ ಮನೆಯನ್ನು ನಡೆಸುವ ಶಕ್ತಿ ಪಡೆಯುತ್ತಾನೆ ಎಂದರು. ನಾನು" I am very sorry sir, ನಾನು ಮೊದಲೇ ಇವನ ಮಾರ್ಕ್ಸ್ ಕಾರ್ಡುಗಳನ್ನು ನೋಡಲಿಲ್ಲ ಹೆಚ್ಚಿನ ವಿವರವನ್ನು ಕೇಳಲಿಲ್ಲ. ತಮಗೆ ತೊಂದರೆ ಕೊಟ್ಟೆ " ಎಂದೆ. ಆಗ ಸರ್ ಅವರು ಮುಗುಳ್ನಗುತ್ತಾ ' 'ಪರ್ವಾಗಿಲ್ಲ, ಹೋಗಿ ಬನ್ನಿ ' ಎಂದು ಬೀಳ್ಕೊಟ್ಟರು. ಮುಂದೆ ಅವನು ಆರ್ಟ್ಸ್ ತೆಗೆದುಕೊಂಡು ಓದಿ ಈಗ ಉತ್ತಮ ಕೆಲಸದಲ್ಲಿ ಇದ್ದಾನೆ.

ಹೀಗೆ ಬಿಜಿಎನ್ ಸರ್ ಅವರು ಪ್ರತಿ ವಿದ್ಯಾರ್ಥಿ ಹಾಗೂ ವ್ಯಕ್ತಿಯ ಸಾಮರ್ಥ್ಯ ನೋಡಿ ಅದಕ್ಕೆ ಸರಿಯಾಗಿ ಸ್ಪಂದಿಸಿ ಮಾರ್ಗದರ್ಶನ ಮಾಡುತ್ತಿದ್ದರು.

**ಮುಗಿಸುವ ಮುನ್ನ.......**

ಬಿಜಿಎನ್ ರವರು ಜಗಳೂರಿನ "ತರಳಬಾಳು ಹುಣ್ಣಿಮೆ "ಮಹೋತ್ಸವದಲ್ಲಿ ಪ್ರಸ್ತಾಪಿಸಿದ ಒಂದು ಅಂಶ ಇಂದಿಗೂ ನನಗೆ ಪ್ರಶ್ನೆಯಾಗಿಯೇ ಉಳಿದಿದೆ. ಅಂದು ಅವರು ಮಾತನಾಡುತ್ತಾ ಒಂದು ವಿಷಯ ಪ್ರಸ್ತಾಪಿಸಿದರು.

"ನಾನು ಗಣಿತದ ಮೇಷ್ಟ್ರು, ಆದರೆ ಒಂದು ಲೆಕ್ಕ ನನಗೆ ಅರ್ಥವೇ ಆಗುತ್ತಿಲ್ಲ. ಏನೆಂದರೆ ನೀವು 1000 ಜನ ಇದ್ದು, ನಿಮಗೆ 925 ಬಾಳೆಹಣ್ಣು ಕೊಟ್ಟು, ಒಬ್ಬೊಬ್ಬರು ನಾಲ್ಕು ಹಣ್ಣು ತಿನ್ನಿರಿ ಎಂದರೆ ಹೇಗೆ ತಿನ್ನಲು ಸಾಧ್ಯ..? " ಎಂದರು. ಇಡೀ ಸಭೆ ಆಶ್ಚರ್ಯ ಮತ್ತು ಕುತೂಹಲದಿಂದ ಅವರನ್ನು ನೊಡಲಾರಂಭಿಸಿತು. ವೇದಿಕೆ ಮೇಲೆ ಕುಳಿತವರೂ ತುಂಬಾ ಗಂಭೀರವಾಗಿ ಬಿಜಿಎನ್ ಅವರನ್ನೇ ನೋಡಲಾರಂಭಿಸಿದರು. ಇದಕ್ಕೆ ಉತ್ತರ ಏನಿರಬಹುದು ಎಂದು...!

ಕೆಲವು ನಿಮಿಷ ಸುಮ್ಮನಿದ್ದ ಬಿಜಿಎನ್ ರವರು ನಂತರ ಮಾತು ಮುಂದುವರೆಸಿ, "ಎಲ್ಲಿಯಾದರೂ ಸಾಧ್ಯವೇ..? 1000 ಜನ 925 ಬಾಳೆಹಣ್ಣು, ಪ್ರತಿಯೊಬ್ಬರು 4 ತಿನ್ನಲು ಸಾಧ್ಯವೇ...? ಒಂದೊಂದು ಸಿಗುವುದೇ ಕಷ್ಟ, ನಮ್ಮ ದೇಶದಲ್ಲಿ ಪ್ರತಿ ಸಾವಿರ ಜನ ಪುರುಷರಿಗೆ 975 ಮಹಿಳೆಯರು ಇದ್ದಾರೆ ಎಂದು ಸೆನ್ಸಸ್ ಹೇಳುತ್ತದೆ, ಹಾಗಿದ್ದಾಗ ಒಬ್ಬೊಬ್ಬರು ನಾಲ್ಕು ಜನರನ್ನು ಹೇಗೆ ಮದುವೆಯಾಗುತ್ತಾರೆ, ಇದು ಹೇಗೆ ಸಾಧ್ಯ...? ಎಂದಾಗ, ಇಡೀ ಸಭೆ ನಗೆಗಡಲಿನಲ್ಲಿ ತೇಲಿತು. ಹೀಗೆ ಒಂದು ಅತ್ಯಂತ ಗಂಭೀರವಾದ, ಸಾಮಾಜಿಕವಾದ ಸಮಸ್ಯೆಯನ್ನು ಕುತೂಹಲಕರವಾಗಿ ಮಂಡಿಸಿ, ಎಲ್ಲರನ್ನೂ ಚಿಂತನೆಗೆ ಹಚ್ಚುವ ವಿಶೇಷ, ವೈಶಿಷ್ಟ್ಯಪೂರ್ಣ, ವಿದ್ವತ್ಪೂರ್ಣ ವ್ಯಕ್ತಿತ್ವ ಅವರದ್ದಾಗಿತ್ತು.

ಅಗಲಿದ ಹಿರಿಯ ಚೇತನಕ್ಕೆ ಶ್ರದ್ಧಾಪೂರ್ವಕ ನಮನಗಳು. ಅವರ ಚೇತನಕ್ಕೆ ಪರಮಾತ್ಮನು ಸದ್ಗತಿಯನ್ನು ಕರುಣಿಸಿದ್ದಾನೆ ಎಂಬ ನಂಬಿಕೆ ನನ್ನದು.



**ಡಾ.ಎ.ಹೆಚ್. ಶಿವಯೋಗಿ ಸ್ವಾಮಿ**
ಮಾಜಿ ಮುಖ್ಯ ಸಚೇತಕರು,
ವಿಧಾನ ಪರಿಷತ್,
ದಾವಣಗೆರೆ.

## ಅಡುಗೆ ಮನೆಯಿಂದ ಆನ್‌ಲೈನ್ ಪ್ರತಿಭಟನೆ




ದಾವಣಗೆರೆ, ಜೂ.9- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಗತ್ಯ ವಸ್ತುಗಳ ಬೆಲೆ ಏರಿಕೆ ನೀತಿ ಖಂಡಿಸಿ ಅಖಿಲ ಭಾರತ ಯುವ ಜನ ಫೆಡರೇಷನ್ ಜಿಲ್ಲಾ ಸಮಿತಿ ಸದಸ್ಯರುಗಳು ಇಂದು ಆನ್‌ಲೈನ್ ಮೂಲಕ ಅಡುಗೆ ಮನೆಯಿಂದ ಪ್ರತಿಭಟನೆ ನಡೆಸಿದರು.

ಅಗತ್ಯ ವಸ್ತುಗಳಾದ ಅಡುಗೆಗೆ ದಿನನಿತ್ಯದ ಬೇಳೆ, ಎಣ್ಣೆ, ಕಾಳುಗಳು, ಅಡುಗೆ ಹಲವಾರು ವಸ್ತುಗಳು ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ಗಗನಕ್ಕೆ ಏರಿದೆ. ಪೆಟ್ರೋಲ್ 100 ರೂ. ಮುಟ್ಟಿದೆ. ವಿದ್ಯುತ್ ಬಿಲ್ ಗಗನಕ್ಕೆ ತಲುಪಿದೆ. 2 ವರ್ಷದಿಂದ ಕೊರೊನಾ ಬಂದಾಗಿನಿಂದ, ದಿನನಿತ್ಯ ಅವತ್ತಿನ ದುಡಿಮೆ ಮಾಡಿ ಬದುಕುವ ಬಡ ಜನರ ಕಷ್ಟ ಹೇಳತೀರದು. ದುಡಿಮೆ ಇಲ್ಲದೆ ಎಷ್ಟು ಜನ ಹಸಿವಿನಿಂದ ಸಾವನ್ನಪ್ಪಿದ್ದಾರೆ. ಈ ವಿಚಾರವಾಗಿ ಆನ್‌ಲೈನ್ ಪ್ರತಿಭಟನೆ ನಡೆಸಿ ಗಮನ ಸೆಳೆದರೂ ಸರ್ಕಾರ ಮೌನ ವಹಿಸಿದೆ ಎಂದು ಎಐವೈಎಫ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಆನ್‌ಲೈನ್ ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಮುಖಂಡರಾದ ಎ. ತಿಪ್ಪೇಶಿ, ಗದಿಗೇಶ್ ಪಾಳೇದ್, ಹೆಚ್. ಹನುಮಂತಪ್ಪ ಹಾಲೇಕಲ್ಲು, ಮಂಜುನಾಥ ಮಳಲಕೆರೆ, ಜೀವನ್ ನಿಟುವಳ್ಳಿ, ಫಜಲುಲ್ಲಾ ಇರ್ಫಾನ್, ರುದ್ರೇಶ್ ಮಳಲಕೆರೆ, ಮಂಜುನಾಥ್ ಮಳಲಕೆರೆ, ಮಳಲಕೆರೆ ಅಂಜಿನಪ್ಪ, ಹೆಚ್.ಎಂ. ಮಂಜುನಾಥ, ಮಂಜುನಾಥ್ ದೊಡ್ಡಮನೆ, ಡಿ. ಮಂಜುನಾಥ ಹರಳಯ್ಯನಗರ, ಪರಶುರಾಮ, ಸಿ. ಗುರುಮೂರ್ತಿ, ಶಿವಯೋಗಿ, ಅಭಿ, ಎ. ರಂಗಸ್ವಾಮಿ, ಮಂಜುನಾಥ ಪಿಗ್ನಿ, ಪರಶುರಾಮ, ಪರಶುರಾಮ ಗೊಲ್ಲರಹಳ್ಳಿ, ಎ. ಮಂಜುನಾಥ, ಕೆ. ಮಲ್ಲಿಕಾರ್ಜುನ್ ಮತ್ತಿತರರು ಭಾಗವಹಿಸಿದ್ದರು.

## ಕೂಡ್ಲಿಗಿ : ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಂಕುಸ್ಥಾಪನೆ




ಕೂಡ್ಲಿಗಿ, ಜೂ.9- ಪಟ್ಟಣದ 2ನೇ ವಾರ್ಡ್‌ನಲ್ಲಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು 19 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಇಂದು ಶಂಕುಸ್ಥಾಪನೆ ನೆರವೇರಿಸಿದರು.

**ಬಾಲ ಚೈತನ್ಯ ಮಕ್ಕಳ ಆರೈಕೆ ಕೇಂದ್ರ ಉದ್ಘಾಟನೆ:** ಶಾಸಕ ಗೋಪಾಲ್ ಕೃಷ್ಣ ಅವರು ಪಟ್ಟಣದಲ್ಲಿ ಬಾಲ ಚೈತನ್ಯ ಮಕ್ಕಳ ಆರೈಕೆ ಕೇಂದ್ರವನ್ನು ಉದ್ಘಾಟಿಸಿದರು. ಅಪೌಷ್ಟಿಕತೆಯಿಂದ ಬಳಲುತ್ತಿರುವ ತಾಲ್ಲೂಕಿನ ಒಟ್ಟು 35 ಮಕ್ಕಳಿಗೆ ಹಾಗೂ ಪ್ರತಿ ಮಗುವಿನ ಒಬ್ಬರು ಪೋಷಕರಿಗೆ 14 ದಿನ ಆರೈಕೆ ಕೇಂದ್ರದಲ್ಲಿ ಪೂರಕ ಪೌಷ್ಟಿಕಾಂಶ ಆಹಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು. ತಾ.ಪಂ ಇಒ ಜಿ.ಎಮ್. ಬಸಣ್ಣ ಹಾಗೂ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

### ಫ್ಯಾಟಿ ಲಿವರ್ ಗುಣವಾಗದು ಎಂಬುದು ಮಿಥ್ಯ, ಚಿಕಿತ್ಸೆಯೇ ಸತ್ಯ

## ಜೀವನಶೈಲಿಯಲ್ಲಿದೆ ಲಿವರ್ ಆರೋಗ್ಯದ ಕೀಲಿ




ಮಾಸ್ಕ್, ಸ್ಯಾನಿಟೈಜರ್, ಸಾಮಾಜಿಕ ಅಂತರ ಇತ್ಯಾದಿಗಳ ಮೂಲಕ ಕೊರೊನಾದಿಂದ ರಕ್ಷಿಸಿಕೊಳ್ಳುವ ಕಾಳಜಿ ದೇಶಾದ್ಯಂತ ನಡೆದಿದೆ. ಅದೇ ರೀತಿ, ದೇಹದ ಆರೋಗ್ಯ ಕಾಪಾಡಿಕೊಳ್ಳಲು ಆರೋಗ್ಯಕರ ಜೀವನ ಶೈಲಿಯೂ ಬೇಕಿದೆ. ಇಲ್ಲದಿದ್ದರೆ, ಫ್ಯಾಟಿ ಲಿವರ್ (ಬೊಜ್ಜು ಯಕೃತ್ತು) ರೀತಿಯ ಸಮಸ್ಯೆಗಳು ನಮ್ಮನ್ನು ಕಾಡಬಹುದು.

ಜೂನ್ 10 ಅನ್ನು 'ನ್ಯಾಶ್ ದಿನ' (ಆಲ್ಕೋಹಾಲೇತರ ಸ್ಟೀಟೊಹೆಪಟೈಟಿಸ್) ಎಂದು ಆಚರಿಸಲಾಗುತ್ತದೆ. ನ್ಯಾಶ್ ಎಂಬುದು ಫ್ಯಾಟಿ ಲಿವರ್ ಉಲ್ಬಣಿಸಿದಾಗ ಬರುವ ರೋಗವಾಗಿದೆ. ಈ ರೋಗದ ಬಗ್ಗೆ ಅರಿವು ಹೊಂದಿ ಆರೋಗ್ಯಕರ ಜೀವನ ಶೈಲಿ ಹೊಂದುವುದೇ ನ್ಯಾಶ್ ದಿನಾಚರಣೆಯ ಉದ್ದೇಶ.

ಫ್ಯಾಟಿ ಲಿವರ್ ಎಂದಾಕ್ಷಣ ಸಾಕಷ್ಟು ಜನರಲ್ಲಿ ತಪ್ಪು ಕಲ್ಪನೆಗಳಿವೆ. ಮದ್ಯ ವ್ಯಸನಿಗಳಿಗಷ್ಟೇ ಈ ರೋಗ ಬರುತ್ತದೆ, ಬೊಜ್ಜಿರುವವರಿಗಷ್ಟೇ ಅಪಾಯ, ವಿಸ್ಕಿ ಬಿಟ್ಟು ವೈನ್ ಇಲ್ಲವೇ ಬೀರ್ ಕುಡಿದರೆ ಸಮಸ್ಯೆಯಾಗದು, ಒಮ್ಮೆ ಫ್ಯಾಟಿ ಲಿವರ್ ಬಂದರೆ ಅದು ಗುಣವಾಗುವುದಿಲ್ಲ... ಹೀಗೆ ಹಲವಾರು ಮಿಥ್ಯೆಗಳನ್ನೇ ಹಲವರು ಸತ್ಯವೆಂದು ನಂಬಿದ್ದಾರೆ.

ಮೊದಲನೆಯದಾಗಿ ಮದ್ಯವ್ಯಸನಿಗಳಷ್ಟೇ ಅಲ್ಲದೇ, ಬೊಜ್ಜು ದೇಹ ಇರುವವರೂ ಸಹ ಫ್ಯಾಟಿ ಲಿವರ್ ಸಮಸ್ಯೆ ಎದುರಿಸುತ್ತಾರೆ. ಅನಾರೋಗ್ಯಕರ ಕುರುಕಲು ತಿಂಡಿ, ಅತಿಯಾದ ತೂಕ, ಔಷಧ, ಹೆಚ್ಚಿನ ಕೊಲೆಸ್ಟ್ರಾಲ್, ಸಕ್ಕರೆ ಕಾಯಿಲೆ, ಥೈರಾಯ್ಡ್ ಸಮಸ್ಯೆ ಹಾಗೂ ಕೆಲವೊಮ್ಮೆ ವಂಶವಾಹಿ ಕಾರಣದಿಂದಲೂ ಫ್ಯಾಟಿ ಲಿವರ್ ಬರುತ್ತದೆ.

ದಪ್ಪಗಿರುವವರಷ್ಟೇ ಫ್ಯಾಟಿ ಲಿವರ್ ಸಮಸ್ಯೆ ಎದುರಿಸುತ್ತಾರೆ ಎಂಬುದು ಇನ್ನೊಂದು ತಪ್ಪು ಕಲ್ಪನೆ. ತೆಳ್ಳಗಿರುವವರೂ ಸಹ ಈ ಸಮಸ್ಯೆ ಎದುರಿಸಬಹುದು. ಇದಕ್ಕೆ 'ಲೀನ್ ನ್ಯಾಶ್' ಎಂಬ ಹೆಸರಿದೆ.

ಫ್ಯಾಟಿ ಲಿವರ್ ಕೇವಲ ವಿದೇಶಗಳಲ್ಲಿನ ಸಮಸ್ಯೆ,

### ಇಂದು 'ನ್ಯಾಶ್ ದಿನಾಚರಣೆ'

ಭಾರತದಲ್ಲಿ ಸಮಸ್ಯೆ ಇಲ್ಲ ಎಂದು ಹೇಳುವಂತಿಲ್ಲ. ವಿಶ್ವದೆಲ್ಲೆಡೆ ಇರುವಂತೆ ಭಾರತದಲ್ಲೂ ಈ ಸಮಸ್ಯೆ ಹೆಚ್ಚಾಗಿದೆ. ಶೇ.30ರಷ್ಟು ಭಾರತೀಯರು ಫ್ಯಾಟಿ ಲಿವರ್ ಹೊಂದಿದ್ದಾರೆ. ಕೋವಿಡ್ ನಡುವೆ ಇದೊಂದು ಮಹಾ ಪಿಡುಗು ಎನ್ನಬಹುದು.

ಕೆಲವರು ವಿಸ್ಕಿ ಬದಲು ವೈನ್ ಇಲ್ಲವೇ ಬೀರ್ ಕುಡಿದರೆ ಸುರಕ್ಷಿತ ಎಂಬ ಭ್ರಮೆಯಲ್ಲಿ ದ್ದಾರೆ. ಮದ್ಯ ಯಾವುದು ಎಂಬುದಕ್ಕಿಂತ ಎಷ್ಟು ಪ್ರಮಾಣದಲ್ಲಿ ಕುಡಿಯಲಾಗುತ್ತದೆ ಎಂಬುದರ ಮೇಲೆ ಯಕೃತ್ತು ಹಾಳಾಗುತ್ತದೆ. ಮದ್ಯ ಯಾವುದೇ ಆಗಿರಲಿ, ಅದನ್ನು ಕುಡಿಯುವುದು ಎಂದರೆ ನೀರಲ್ಲಿ ವಿಷ ಹಾಕಿ ಕುಡಿದಂತೆ. ಫ್ಯಾಟಿ ಲಿವರ್ ಹೊಂದಿರುವವರು ಮದ್ಯ ಸೇವಿಸಲೇ ಬಾರದು.

ಬೊಜ್ಜು, ಯಕೃತ್ತಿನ ಸಮಸ್ಯೆ ಕಡೆಗಣಿಸಬಾರದು. ಈ ಸಮಸ್ಯೆ ಹೊಂದಿರುವ ಶೇ. 30ರಷ್ಟು ಜನರು ಮುಂದೆ ಗಂಭೀರ ಸಮಸ್ಯೆ ಎದುರಿಸಬೇಕಾಗುತ್ತದೆ. ಲಿವರ್ ಸಿರೋಸಿಸ್ ಎಂಬ ಸಮಸ್ಯೆಯಾಗಿ ಉಲ್ಬಣಿಸಿದರೆ ಅದನ್ನು ಸರಿ ಪಡಿಸಲಾಗದು. ಇದರಿಂದಾಗಿ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಕ್ಯಾನ್ಸರ್, ಬೊಜ್ಜು ಇತ್ಯಾದಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಅಕಸ್ಮಾತ್ ಫ್ಯಾಟಿ ಲಿವರ್ ಸಮಸ್ಯೆ ಕಾಣಿಸಿಕೊಂಡಿತು ಎಂದರೆ ಇದನ್ನು ಬಗೆಹರಿಸಲಾಗದು ಎಂಬ ಕಳವಳ ಬೇಡ. ಬೊಜ್ಜು ಸಮಸ್ಯೆ 'ನ್ಯಾಶ್' ಹಂತಕ್ಕೆ ಆನಂತರ ಸಿರೋಸಿಸ್ ಹಂತಕ್ಕೆ ಹೋಗುವ ಮುಂಚೆ ತಡೆಯಬಹುದು. ಸಿರೋಸಿಸ್ ಮಾತ್ರ ನಿಲ್ಲಿಸಲಾಗದ ರೋಗವಾಗಿದೆ. ಫ್ಯಾಟಿ ಲಿವರ್ ಇಲ್ಲವೇ ನ್ಯಾಶ್ ಸೂಕ್ತ ಜೀವನ ಶೈಲಿ ಹಾಗೂ ಔಷಧದ ಮೂಲಕ ಬಗೆಹರಿಯುತ್ತದೆ. ಆದರೆ, ಒಂದೊಮ್ಮೆ ಸಿರೋಸಿಸ್‌ಗೆ ಸಮಸ್ಯೆ ಹೋಯಿತು ಎಂದರೆ, ಯಕೃತ್ತಿನ ಕಸಿ ಮಾಡುವುದೊಂದು ಉಳಿಯುವ ದಾರಿ.

ಸೂಕ್ತ ಜೀವನ ಶೈಲಿ ಫ್ಯಾಟಿ ಲಿವರ್ ನಿವಾರಣೆಗೆ ರಾಮಬಾಣ. ಅತಿಯಾದ ತೂಕವಿದ್ದರೆ ಇಳಿಸುವುದು, ಕಸರತ್ತು, ಆರೋಗ್ಯಕರ ಆಹಾರ, ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಣ, ಕೊಲೆಸ್ಟ್ರಾಲ್ ನಿಯಂತ್ರಣಗಳ ಜೊತೆಗೆ ಸೂಕ್ತ ಔಷಧ ಸೇವನೆಯೂ ಮಹತ್ವ ಪಡೆದಿದೆ.

ಜೀವನ ಶೈಲಿಯ ಬದಲಾವಣೆಯೊಂದಿಗೆ ಬಹಳಷ್ಟು ಜನರು ಯಕೃತ್ತಿನ ಆರೋಗ್ಯ ಸುಧಾರಿಸಿಕೊಳ್ಳಲು ಸಾಧ್ಯ. ಆದರೆ, ಕೆಲವರ ಯಕೃತ್ತಿನ ತಪಾಸಣೆಗೆ ಪ್ರತ್ಯೇಕ ಟೆಸ್ಟ್‌ಗಳ ಅಗತ್ಯವಿರುತ್ತದೆ.

ಟೆಸ್ಟ್‌ಗಳ ಫಲಿತಾಂಶ ಆಧರಿಸಿ ವೈದ್ಯರು ಚಿಕಿತ್ಸೆ ನಿರ್ಧರಿಸುತ್ತಾರೆ. ಹೀಗಾಗಿ ಫ್ಯಾಟಿ ಲಿವರ್ ಸಮಸ್ಯೆ ಕಡೆಗಣಿಸದೇ ಗ್ಯಾಸ್ಟ್ರೋಎಂಟೆರಾಲಜಿಸ್ಟ್ ಇಲ್ಲವೇ ಹೆಪಟ ಲಾಜಿಸ್ಟ್ ಅವರನ್ನು ಸಂಪರ್ಕಿಸುವುದು ಸರಿಯಾದ ದಾರಿ.



**ಡಾ. ಸಿ.ಕೆ. ಆದರ್ಶ್**
ಎ.ಡಿ., ಡಿ.ಎನ್.ಬಿ. (ಗ್ಯಾಸ್ಟ್ರೋ)
ಚೀಫ್ ಕನ್ಸಲ್ಟೆಂಟ್,
ಗ್ಯಾಸ್ಟ್ರೋಎಂಟರಾಲಜಿಸ್ಟ್
ಅಂಡ್ ಹೆಪಟಾಲಜಿಸ್ಟ್, ಬಿ.ಜಿ.ಎಸ್.
ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆ,
ಬೆಂಗಳೂರು. ಮೊ : 9844136480
adarshck@gmail.com

## ಚೀನಾದ ಜೊತೆ ಸ್ಪರ್ಧೆಗಾಗಿ ಅಮೆರಿಕದ ಸೆನೆಟ್‌ನಲ್ಲಿ ಮಸೂದೆ ಜಾರಿ

ವಾಷಿಂಗ್ಟನ್, ಜೂ. 9 - ಚೀನಾದ ಜೊತೆ ಆರ್ಥಿಕ ಸ್ಪರ್ಧೆ ಸುಧಾರಿಸುವ ಉದ್ದೇಶದ ಪ್ರಮುಖ ಶಾಸನಾತ್ಮಕ ಪ್ಯಾಕೇಜ್‌ಗೆ ಅಮೆರಿಕದ ಸೆನೆಟ್ ಒಪ್ಪಿಗೆ ನೀಡಿದೆ. ಚೀನಾದ ಕಮ್ಯುನಿಸ್ಟ್ ಸರ್ಕಾರ, ಆರ್ಥಿಕ ವಲಯದಲ್ಲಿ ಧಮನಕಾರಿ ನೀತಿ ಅನುಸರಿಸುತ್ತಿದೆ ಎಂದು ಅಮೆರಿಕ ಆರೋಪಿಸಿದೆ.

68-32 ಮತಗಳ ಅಂತರದಲ್ಲಿ ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಇದು ಸೆನೆಟ್‌ನ ಬಹುಮತ ಹೊಂದಿರುವ ನಾಯಕ ಚಕ್ ಶುಮರ್ ಅವರಿಗೆ ಪ್ರಮುಖ ಜಯವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಆವಿಷ್ಕಾರ ವಲಯದಲ್ಲಿ ಅಮೆರಿಕದ ನಾಯಕತ್ವ ಬಲಪಡಿಸಲು 100 ಶತಕೋಟಿ ಡಾಲರ್ ಹೂಡಿಕೆ ಮಾಡುವ ಅಮೆರಿಕದ ಅನ್ವೇಷಣೆ ಹಾಗೂ ಸ್ಪರ್ಧಾ ಕಾಯ್ದೆಗೆ ಒಪ್ಪಿಗೆ ನೀಡಲಾಗಿದೆ. ಈ ಮೂಲಕ ಪೂರೈಕೆ ಜಾಲ ಬಲಪಡಿಸಲು ಹಾಗೂ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಆಗುವ ಅಡ್ಡಿಗಳನ್ನು ನಿವಾರಿಸಲು ಉದ್ದೇಶಿಸಲಾಗಿದೆ.

## ಉದಾಸಿಗೆ ರಂಭಾಪುರಿ ಜಗದ್ಗುರುಗಳ ಸಂತಾಪ

ಬಾಳೆಹೊನ್ನೂರು, ಜೂ. 9- ಮಾಜಿ ಸಚಿವರೂ ಆದ ಹಿರಿಯ ಶಾಸಕ ಸಿ.ಎಂ. ಉದಾಸಿಯವರ ಅಗಲಿಕೆಗೆ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮುತ್ಸದ್ಧಿ ರಾಜಕಾರಣಿಯಾಗಿದ್ದ ಉದಾಸಿ ಅವರು ರಂಭಾಪುರಿ ಪೀಠದೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಹಲವಾರು ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಂಡ ನೆನಪುಗಳನ್ನು ಜಗದ್ಗುರುಗಳು ಸ್ಮರಿಸಿದ್ದಾರೆ.

## ರಾಣೇಬೆನ್ನೂರು : ಸ್ವಾಮೀಜಿಗಳು ಜನರನ್ನು ಹೆದರಿಸಬಾರದು



ರಾಣೇಬೆನ್ನೂರು, ಜೂ.9- ಕೊರೊನಾ ಜನರ ಬದುಕನ್ನು ಕಸಿದುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಸ್ವಾಮೀಜಿಗಳು ಜನರಿಗೆ ಧೈರ್ಯ ತುಂಬುವ ಕಾರ್ಯ ಮಾಡಬೇಕು ಎಂದು ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಮಲ್ಲೇಶಣ್ಣ ಅರಕೇರಿ ಅಸಮಾಧಾನ ವ್ಯಕ್ತಪಡಿಸಿದರು.

ಅವರು ಲಯನ್ಸ್ ಶಾಲೆಯಲ್ಲಿ ನಡೆದ ಔಷಧಿ ವಿತರಣಾ ಕಾರ್ಯಕ್ರಮದಲ್ಲಿ ಕೊರೊನಾ ಕಾಯಿಲೆಗಿಂತ ಅದರ ಹೆದರಿಕೆಯಲ್ಲಿಯೇ ಬಹಳಷ್ಟು ಜನ ಸಾವನ್ನಪ್ಪಿದ್ದಾರೆ. ಸ್ವಾಮೀಜಿಗಳು ಜನರನ್ನು ಮತ್ತಷ್ಟು ಹೆದರಿಸುವಂತಹ ಮಾತುಗಳನ್ನು ಆಡಬಾರದು. ಮಾಧ್ಯಮಗಳು ಸಹ ಇಂತಹ ಹೇಳಿಕೆಗಳನ್ನು ಪ್ರಸಾರ ಮಾಡದೇ, ಜನರ ಹಿತ ಕಾಪಾಡುವ ಜವಾಬ್ದಾರಿ ಹೊರಬೇಕು ಎಂದು ಕೋಡಿಹಳ್ಳಿ ಸ್ವಾಮೀಜಿ ಹೇಳಿಕೆಯನ್ನು ಪ್ರಸ್ತಾಪಿಸದೆ, ಅರಕೇರಿ ಬೇಸರ ವ್ಯಕ್ತಪಡಿಸಿದರು.

ಸಚಿವ ಶಂಕರ್, ಲಯನ್ ಅಧ್ಯಕ್ಷ ಜಯಣ್ಣ ಮುಚಡಿ, ನಗರಸಭೆ ಸದಸ್ಯ ಮಲ್ಲಪ್ಪ ಅಂಗಡಿ, ತಾಲ್ಲೂಕು ವೈದ್ಯಾಧಿಕಾರಿ ಡಾ. ಸಂತೋಷ್ ಇನ್ನಿತರರಿದ್ದರು.

**ಸೈಟುಗಳು ಮಾರಾಟಕ್ಕಿವೆ**
S.S. 'B' Block ನಲ್ಲಿ, ಬಂಟರ ಕಲ್ಯಾಣ ಮಂಟಪ ಹತ್ತಿರ 30x40 East, 30x50 East, 40x50 Corner, 40x60 East, 27x40 East, 28x50 South.
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
**ಸ್ಫೂರ್ತಿ ಸೇವಾ ಟ್ರಸ್ಟ್, ದಾವಣಗೆರೆ**
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಬೇಕಾಗಿದ್ದಾರೆ**
ಈರುಳ್ಳಿ ಮಂಡಿಯಲ್ಲಿ ಕೆಲಸ ಮಾಡಲು ಎಸ್.ಎಸ್.ಎಲ್.ಸಿ ಪಾಸಾದ ಇಬ್ಬರು ಕೆಲಸಗಾರರು ಬೇಕಾಗಿದ್ದಾರೆ. ಸಂಬಳ ರೂ. 5000/- ಕೆಲಸದ ಸಮಯ ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ
ಸಂಪರ್ಕಿಸಿ:
98445 93688

**ಮನೆ ಬಾಡಿಗೆಗಿದೆ**
#128, 'ಡಿ' ಬ್ಲಾಕ್, ಜೆ.ಹೆಚ್. ಪಟೇಲ್ ಬಡಾವಣೆ, ದಾವಣಗೆರೆ. 2 ಬೆಡ್ ರೂಂ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಯುರೋ ಕಿಡ್ ಸ್ಕೂಲ್ ಹತ್ತಿರ, ನೆಲ ಮಹಡಿ ಹೊಸ ಮನೆ ಬಾಡಿಗೆಗಿದೆ.
ಫೋ. : 88614 84212

**ಶ್ರೀ ಸಿಗಂದೂರು ಚೌಡೇಶ್ವರಿ ಉಪಹಾರ ದರ್ಶಿನಿ**
ಪಿ.ಬಿ. ರೋಡ್ ರೇಣುಕಾ ಮಂದಿರ ಪಕ್ಕ ತೆರೆದಿರುತ್ತದೆ.
ಪಾರ್ಸೆಲ್ ಮಾತ್ರ
90086 85946
91640 99906

**ಅನುಭವವುಳ್ಳ ಸ್ಟಾಫ್‌ನರ್ಸ್ ಬೇಕಾಗಿದ್ದಾರೆ**
ಮೊ: 99725 23910

**ಮನೆಗಳು ಲೀಜ್ ಗೆ / ಬಾಡಿಗೆಗೆ ಇವೆ**
ನಗರದ. ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1 ಮತ್ತು 2ನೇ ಮಹಡಿ, ಪೂರ್ವ ಬಾಗಿಲು ಇರುವ ಮನೆಗಳು ಲೀಸ್ ಗೆ / ಬಾಡಿಗೆಗೆ ಇವೆ. ಸಂಪರ್ಕಿಸಿ:
9741746205 8431255250, 9902299961

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ, ಕರ್ನಾಟಕ ಗೃಹ ಮಂಡಳಿಯಲ್ಲಿ ಇವೆ. 50x80 South, 50x80 North, 40x60 East, 40x60 North, 30x40 North, 30x40 South, 30x50 West 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹೊಂಬಾಳ್ ಇ-ಮಾರ್ಟ್**
ದಾವಣಗೆರೆಯ ಎಲ್ಲಾ ಭಾಗಗಳಲ್ಲಿ ಮಿನಿ ಇ- ಮಾರ್ಟನ್ನು ಪ್ರಾರಂಭಿಸಲು ಸಮಾನ ಮನಸ್ಕ ಹೂಡಿಕೆದಾರರು ಬೇಕಾಗಿದ್ದಾರೆ. ನಿರ್ದಿಷ್ಟ ಆದಾಯದ ಜೊತೆಗೆ ಭದ್ರತೆಯನ್ನು ಒದಗಿಸಲಾಗುವುದು.
ಫೋ. : 90089 85112

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.**
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
9986361250
9113285992

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಭದ್ರಾ ನ್ಯಾಚುರಲ್ಸ್**
ಮೆಡ್ ಪ್ಲಸ್ ಎದುರು, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
ಆಯುರ್ವೇದಿಕ್ ಔಷಧಗಳು
ರೋಗ ನಿರೋಧಕ ಶಕ್ತಿವೃದ್ಧಿಯ ಪೋಷಕಾಂಶಗಳು, ಮನೆ ಮದ್ದುಗಳು ಒಂದೇ ಸೂರಿನಡಿ
ಸಂಪರ್ಕಿಸಿ: ಮೆಳ್ಳೇಕಟ್ಟೆ ಬಸವರಾಜ್ ಬಿ.ಎಸ್ಸಿ (ಅಗ್ರಿ)
94483 23796
76761 38170

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನ ದಾಸೋಹ ದಾಸೋಹಿಗಳು
ಶ್ರೀಮತಿ ಮಂಜುಳ ಶ್ರೀ ಬಿ.ಕೆ.ನಿಂಗಪ್ಪ., ಇಂಜಿನಿಯರ್. ದಾವಣಗೆರೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭವಿಷ್ಯ Astrologer**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ,ವಶೀಕರಣ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ
99807 70791

**JOBS**
MCS ACADEMY
Training & Placement Cell
98444 92888

**Wanted SalesMan**
Contact with Resume
ಪರಿಮಳ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ
94482 72734

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು ಇಂದು ದಿ. 10.06.2020ರ ಗುರುವಾರ ಮತ್ತು ನಾಳೆ 11.06.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292


## ಕಾಮಗಾರಿಗಳನ್ನು ಪರಿಶೀಲಿಸಿದ ಮೇಯರ್ ವೀರೇಶ್



ದಾವಣಗೆರೆ, ಜೂ.9- ನಗರದ ನಗರ ಪಾಲಿಕೆ ಎದುರಿನ ರೈಲ್ವೇ ಅಂಡರ್ ಬ್ರಿಡ್ಜ್ ಒಳ ಚರಂಡಿಯಲ್ಲಿ ತುಂಬಿರುವ ಹೂಳು ತೆಗೆಯುವ ಕಾಮಗಾರಿಯನ್ನು ಮೇಯರ್ ಎಸ್.ಟಿ. ವೀರೇಶ್ ಅವರು ಇಂದು ಪರಿಶೀಲಿಸಿ, ತ್ವರಿತವಾಗಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಲ್ಲದೇ, ಜಿಲ್ಲಾ ಚಿಗಟೇರಿ ಆಸ್ಪತ್ರೆ ಹಿಂಭಾಗದ ಜಲ ಸಂರಕ್ಷಣಾ ಘಟಕಕ್ಕೆ ಭೇಟಿ ನೀಡಿ ಮತ್ತು ಆಸ್ಪತ್ರೆ ಆವರಣದ ಸ್ವಚ್ಛತೆ ಬಗ್ಗೆ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಶಿವನಗೌಡ ಟಿ. ಪಾಟೀಲ್ ಅಧಿಕಾರಿಗಳಾದ ಸತೀಶ್ ನಾಯ್ಕ, ಸಚಿನ್, ಆರ್.ಪ್ರತಾಪ್, ಶ್ರೀಕಾಂತ್ ನೀಲಗುಂದ ನಿರಂಜನ ಸೇರಿದಂತೆ ಇತರರು ಇದ್ದರು.

## ಆರ್ಯವೈಶ್ಯ ದಾನಿಗಳಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಕೊಡುಗೆ



ದಾವಣಗೆರೆ, ಜೂ.9 - ನಗರದ ಆರ್ಯ ವೈಶ್ಯ ಸಮಾಜದ ದಾನಿಗಳು ಕೊರೊನಾ ಸೋಂಕಿತರಿಗೆ ನೆರವಾಗಲು ಐದು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಿದ್ದಾರೆ. ಈ ಕಾನ್ಸಂಟ್ರೇಟರ್‌ಗಳನ್ನು ಶ್ರೀ ಕನ್ನಿಕಾ ಪರಮೇಶ್ವರಿ ಕೋ ಆಪ್ ಬ್ಯಾಂಕ್‌ನಲ್ಲಿ ನಡೆದ ಸಮಾರಂಭದಲ್ಲಿ ಹಸ್ತಾಂತರಿಸಲಾಯಿತು.

ಕಾನ್ಸಂಟ್ರೇಟರ್‌ಗಳನ್ನು ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘ, ಎಸ್.ಕೆ.ಪಿ. ಬ್ಯಾಂಕ್, ಜಿಲ್ಲಾ ಆರ್ಯವೈಶ್ಯ ಸಮಿತಿ ನಿರ್ವಹಿಸಲಿವೆ. ಎಲ್ಲಾ ಸಮುದಾಯದವರಿಗೂ ಕಾನ್ಸಂಟ್ರೇಟರ್ ನೆರವು ಕಲ್ಪಿಸಲಾಗುತ್ತದೆ.

ದೇವಸ್ಥಾನ ಸಂಘದ ಆಜೀವ ಗೌರವ ಅಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ಆರ್.ಎಲ್.ರಮಾನಂದ್, ಡಾ. ಬಿ.ಎಸ್. ನಾಗಪ್ರಕಾಶ್ ನೆರವೇರಿಸಿದರು.

ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಬ್ಯಾಂಕ್ ಅಧ್ಯಕ್ಷ ಆರ್.ಜಿ ಶ್ರೀನಿವಾಸಮೂರ್ತಿ, ದಾನಿಗಳಲ್ಲೊಬ್ಬರಾದ ಜೆ.ಎಸ್.ಬದ್ರಿನಾಥ್, ಗುಂಡಾಲ್ ಮಂಜುನಾಥ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## 18ನೇ ವಾರ್ಡಿನಲ್ಲಿ ಕೋವಿಡ್ ಲಸಿಕೆ



ದಾವಣಗೆರೆ, ಜೂ.9 - ನಗರ ಪಾಲಿಕೆ ವ್ಯಾಪ್ತಿಯ 18ನೇ ವಾರ್ಡಿನ ಕಾಯಿಪೇಟೆಯ ಜೀಜಾಮಾತಾ ಶಾಲೆಯಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಅವರು 45 ವರ್ಷ ಮೇಲ್ಪಟ್ಟವರಿಗೆ ಮೊದಲನೇ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರ ಕಡೆಯಿಂದ ಜಿಮ್ ಸಿಪ್ ಜ್ಯೂಸನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ ವೀರೇಶ್, ವಾರ್ಡಿನ ಸದಸ್ಯರಾದ ಸೋಗಿ ಶಾಂತಕುಮಾರ್, ಪಂಚಾಕ್ಷರಿ, ಪವನ್, ಚಂದು ಹೆಚ್.ಜಿ, ಸೋಗಿ ಗುರುಶಾಂತ್, ರವಿ, ಕೊಟ್ರೇಶ್ ಲಸಿಕಾ ಕೇಂದ್ರದ ಸಿಬ್ಬಂದಿಗಳಾದ ರೇಖಾ ಸಿಸ್ಟರ್ ಹಾಗೂ ಸರಿತಾ ಸಿಸ್ಟರ್, ವಿದ್ಯಾಸಾಗರ್ ಹಾಗೂ ಇತರೆ ಸಿಬ್ಬಂದಿ ಜೊತೆಗಿದ್ದರು.

## ಸವಿತಾ ಸಮುದಾಯದವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲು ಮನವಿ

ದಾವಣಗೆರೆ, ಜೂ.9 - ಸವಿತಾ ಸಮಾಜದ ಸಮುದಾಯ ಮತ್ತು ಬ್ಯೂಟಿ ಪಾರ್ಲರ್ ಸಿಬ್ಬಂದಿಗಳಿಗೆ ಉಚಿತವಾಗಿ 18 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ಮೇರೆಗೆ ಕೋವಿಡ್ - 19 ಲಸಿಕೆ ನೀಡುವಂತೆ ಸವಿತಾ ಸಮಾಜದ ಅಧ್ಯಕ್ಷ ಎನ್.ರಂಗಸ್ವಾಮಿ ಅವರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಆದಷ್ಟು ಬೇಗ ಸವಿತಾ ಸಮಾಜದ ಸಮುದಾಯದವರಿಗೆ ಕೋವಿಡ್ - 19 ಲಸಿಕೆಯನ್ನು ನೀಡಬೇಕು. ವೈದ್ಯಕೀಯ ಕ್ಷೇತ್ರದ ನಂತರ ನಾಗರಿಕರಿಗೆ ಅತ್ಯಂತ ಸಮೀಪದಿಂದ ಸ್ಪರ್ಶಿಸುವರೆಂದರೆ ಸವಿತಾ ಸಮಾಜದ ಸಮುದಾಯದವರು. ಈ ಹಿನ್ನೆಲೆಯಲ್ಲಿ ಆದ್ಯತೆ ಮೇರೆಗೆ ಕೋವಿಡ್ ಲಸಿಕೆ ನೀಡಲು, ಕಾರ್ಯದರ್ಶಿ ಜಿ.ಎಸ್. ಪರಶುರಾಮ್, ಖಜಾಂಚಿ ಆರ್. ಕರಿಬಸಪ್ಪ ಅವರುಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

### ಓದುಗರ ಪತ್ರ

## ದಾವಣಗೆರೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರಾಗಲಿ

ಮಾನ್ಯರೇ,

ದಾವಣಗೆರೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಇದ್ದಿದ್ದರೆ ಕೊರೊನಾ ರೋಗದಿಂದಾಗಿರುವ ಸಾವು-ನೋವುಗಳನ್ನು ತಡೆಯಬಹುದಿತ್ತು. ಕೊರೊನಾ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ದಾವಣಗೆರೆ ಸುತ್ತಮುತ್ತಲಿನ ನಾಲ್ಕಾರು ಜಿಲ್ಲೆಯ ಜನರು ದಾವಣಗೆರೆ ಸಾರ್ವಜನಿಕ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ.

ಸರ್ಕಾರಿ ವೈದ್ಯಕೀಯ ಕಾಲೇಜು ಇದ್ದಲ್ಲಿ ದಾವಣಗೆರೆ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರ ಮತ್ತು ವೈದ್ಯಕೀಯ ಕಾಲೇಜು ನೂರಾರು ನುರಿತ ತಜ್ಞ ವೈದ್ಯರು, ವಿಜ್ಞಾನಿಗಳು, ನರ್ಸ್‌ಗಳು ಅರ್ಹತೆ ಆಧಾರದ ಮೇಲೆ 300 ರಿಂದ 400 ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ವೈದ್ಯಕೀಯ ಶಿಕ್ಷಣಕ್ಕೆ ಉಚಿತ ಪ್ರವೇಶ ಸಿಗುತ್ತಿತ್ತು. ಸ್ಥಳೀಯ ವಿದ್ಯಾರ್ಥಿಗಳಿಗೆ ಆದ್ಯತೆ ಇರುವುದರಿಂದ ಜಿಲ್ಲೆಯಲ್ಲಿ ವೈದ್ಯರ ಸಂಖ್ಯೆ ಹೆಚ್ಚುತ್ತಿತ್ತು.

ಈ ಸಂಬಂಧ ಮನವಿ, ವರದಿ, ಹೋರಾಟಗಳು ಫಲಪ್ರದವಾಗಲಿಲ್ಲ. ಪತ್ರ ಚಳುವಳಿಯಲ್ಲೂ 7 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸರ್ಕಾರವನ್ನು ಒತ್ತಾಯಿಸಿದರೂ ಪ್ರಯೋಜನವಾಗಲಿಲ್ಲ. ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ರಾಜ್ಯದ ಅತಿದೊಡ್ಡ ಎರಡನೇ ಜಿಲ್ಲಾಸ್ಪತ್ರೆ ದಾವಣಗೆರೆಯಲ್ಲಿದ್ದು, ಕೂಡಲೇ ಸರ್ಕಾರ ವೈದ್ಯಕೀಯ ಕಾಲೇಜು ಮಂಜೂರು ಮಾಡಬೇಕು. ಇದರಿಂದ ಜಿಲ್ಲೆಯ ಬಡ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣ ಪಡೆಯುವ ಕನಸು ನನಸಾಗುತ್ತದೆ.

- ಹೆಲ್ಪ್‌ಲೈನ್ ಸುಭಾನ್, ದಾವಣಗೆರೆ.

# ಪೆಟ್ರೋಲ್, ಡೀಸೆಲ್ ಖರೀದಿಗೆ ಸಾಲ ಕೊಡಿ : ಯುವ ಕಾಂಗ್ರೆಸ್



ದಾವಣಗೆರೆ, ಜೂ.9- ಕೊರೊನಾದಿಂದಾಗಿ ಆರ್ಥಿಕ ಹಿಂಜರಿತ ಉಂಟಾಗಿದ್ದರೂ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಗಗನಕ್ಕೇರಿದ್ದು, ಈ ನಿಟ್ಟಿನಲ್ಲಿ ವಾಹನಗಳಿಗೆ ಪೆಟ್ರೋಲ್, ಡೀಸೆಲ್ ಹಾಕಿಸಲು ಲೋನ್ ನೀಡಬೇಕೆಂದು ಒತ್ತಾಯಿಸಿ ಭಾರತೀಯ ಯುವ ಕಾಂಗ್ರೆಸ್ ಸದಸ್ಯರು ನಗರದಲ್ಲಿ ನಿನ್ನೆ ಪ್ರತಿಭಟಿಸಿದ್ದಾರೆ.

ಮಂಡಿಪೇಟೆಯಲ್ಲಿರುವ ಕೆನರಾ ಬ್ಯಾಂಕ್, ಎಸ್‌ಬಿಐ, ಸಿಂಡಿಕೇಟ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಸೇರಿದಂತೆ ಇತರೆ ಬ್ಯಾಂಕುಗಳಿಗೆ ತೆರಳಿ ಅಲ್ಲಿನ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಲಾಯಿತು.

ದೇಶಾದ್ಯಂತ ಲಾಕ್‌ಡೌನ್ ಪರಿಸ್ಥಿತಿಯಲ್ಲಿ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದು, ಇದರ ನಡುವೆ ಪೆಟ್ರೋಲ್ ಮತ್ತು ಡಿಸೇಲ್ ದರ ಗಗನಕ್ಕೇರಿದೆ. ಈ ನಿಟ್ಟಿನಲ್ಲಿ ವಾಹನಗಳಿಗೆ ಸಾಲ ಸೌಲಭ್ಯ ನೀಡುವ ರೀತಿಯಲ್ಲೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಂಧನಕ್ಕಾಗಿ ಸಾಲ ನೀಡುವಂತೆ ಅನುಕೂಲವಾಗಲು ಅರ್ಜಿ ನೀಡುವಂತೆ ಆಗ್ರಹಿಸಲಾಯಿತು.

40-50 ಸಾವಿರದ ದ್ವಿಚಕ್ರ ವಾಹನ ಸೇರಿದಂತೆ ಇನ್ನಿತರೆ ವಾಹನಗಳ ಖರೀದಿಗೆ ಸಾಲ ನೀಡಲಾಗುತ್ತದೆ. ಆದರೆ ಅದಕ್ಕೆ ಬೇಕಾಗಿರುವ ಪೆಟ್ರೋಲ್, ಡೀಸೆಲ್‌ಗೆ ದಿನಂಪ್ರತಿ 100 ರೂ.ಗಳಂತೆ ಒಬ್ಬ ವ್ಯಕ್ತಿಗೆ ವರ್ಷಕ್ಕೆ ಅಂದಾಜಿನ ಪ್ರಕಾರ 60 ಸಾವಿರ ರೂ ಇಂಧನ ತುಂಬಿಸಲು ಬೇಕಾಗುತ್ತದೆ. ಕಾರಣ ಈ ಕೂಡಲೇ ದೇಶದ ಪ್ರಧಾನ ಮಂತ್ರಿ ಮೋದಿಯವರು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಆದೇಶ ಹೊರಡಿಸಿ, ಇಂಧನಕ್ಕಾಗಿಯೇ ಸಾಲ ನೀಡುವಂತೆ ಸೂಚಿಸಬೇಕೆಂದರು.

ಈ ವೇಳೆ ಯುವ ಕಾಂಗ್ರೆಸ್ಸಿನ ವಕ್ತಾರ ಹೆಚ್.ಜೆ. ಮೈನುದ್ದೀನ್, ಮೊಹಮ್ಮದ್ ಸಾಧಿಕ್, ಸದ್ದಾಂ, ಮಹಮ್ಮದ್ ವಾಜಿದ್, ಮಹಮ್ಮದ್ ರಫೀಕ್, ರಾಕೇಶ್, ಫಾರೂಕ್ ಶೇಕ್ ಇದ್ದರು.

# 16ನೇ ವಾರ್ಡ್‌ನಲ್ಲಿ ಎಸ್ಸೆಸ್, ಎಸ್ಸೆಸ್ಸೆಂ ನೇತೃತ್ವದ ಉಚಿತ ಲಸಿಕಾ ಶಿಬಿರಕ್ಕೆ ಚಾಲನೆ



ದಾವಣಗೆರೆ, ಜೂ. 9 - ನಗರದ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳ ಆಶಯದಂತೆ, ಎಲ್ಲಾ ವರ್ಗದ ಜನರಿಗೆ ತಮ್ಮ ಸ್ವಂತ ಹಣದಿಂದ ಉಚಿತವಾಗಿ ಕೋವಿಶೀಲ್ಡ್ ಲಸಿಕೆಯನ್ನು ತರಿಸಿ, ಸಾರ್ವಜನಿಕರಿಗೆ ವಿತರಿಸುವ ಕಾರ್ಯ ಮುಂದುವರೆದಿದೆ.

ನಗರ ಪಾಲಿಕೆಯ 16ನೇ ವಾರ್ಡ್‌ನ ವಿನೋಬನಗರದ ಶ್ರೀ ಮುರುಘ ರಾಜೇಂದ್ರ ಶಾಲೆ ಆವರಣದಲ್ಲಿ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕೂ ಆದ ವಾರ್ಡಿನ ಸದಸ್ಯ ಎ.ನಾಗರಾಜ್ ನೇತೃತ್ವದಲ್ಲಿ ಕೋವಿಶೀಲ್ಡ್ ಲಸಿಕಾ ಅಭಿಯಾನಕ್ಕೆ ಇಂದು ಚಾಲನೆ ನೀಡಲಾಯಿತು.

ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಪಾಲಿಕೆ ಸದಸ್ಯ ಕೆ.ಚಮನ್‌ಸಾಬ್, ಮುಖಂಡ ಉಮೇಶ್, ಕಾರ್ಯಕರ್ತರುಗಳಾದ ಕಾಳಿಂಗರಾಜ, ರವಿಕುಮಾರ, ರಾಮಚಂದ್ರ ರಾಯ್ಕರ್, ರಮೇಶ್, ಸತೀಶ ಶೆಟ್ಟಿ, ವಾಗೀಶ, ಮಂಜುನಾಥ್, ಸುರೇಶ್, ರವಿ ಇನಾಂದಾರ್, ಚಂದ್ರು, ಶಿಕ್ಷಕ ಮಹಾಲಿಂಗಪ್ಪ, ವೀರಣ್ಣ, ಚೌಡಪ್ಪ ಸೇರಿದಂತೆ ಅನೇಕರು ಭಾಗವಹಿಸಿದ್ದರು.

200ಕ್ಕೂ ಹೆಚ್ಚು ನಾಗರಿಕರು ಲಸಿಕೆ ಪಡೆದು, ಡಾ.ಶಾಮನೂರು ಶಿವಶಂಕರಪ್ಪ ಮತ್ತು ಶಾಮನೂರು ಮಲ್ಲಿಕಾರ್ಜುನ್ ಅವರುಗಳ ಸೇವೆಗೆ ಧನ್ಯವಾದ ಹೇಳಿದರು.

## ಕೆನರಾ ಬ್ಯಾಂಕಿನ ಸಮಾಜ ಸೇವೆ : ಮೇಯರ್ ಶ್ಲ್ಯಾಘನೆ




ದಾವಣಗೆರೆ, ಜೂ.9 - ಕೆನರಾ ಬ್ಯಾಂಕ್ ದೇಶಕ್ಕಾಗಿ ಹಣಕಾಸು ಸೇವೆಯನ್ನು ಸಲ್ಲಿಸುವುದರ ಜೊತೆಗೆ ಸಾಮಾಜಿಕ ಬಾಧ್ಯತೆಯಿಂದ ಸಮಾಜ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದು ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆನರಾ ಬ್ಯಾಂಕ್ ವತಿಯಿಂದ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಇಂದು ಆಯೋಜಿಸಿದ್ದ ಕೊರೊನಾ ಸಂತ್ರಸ್ತರಿಗೆ, ಕೊರೊನಾ ವಾರಿಯರ್ಸ್‌ಗಳಿಗೆ ಹಾಗೂ ಕೊರೊನಾ ಸಂತ್ರಸ್ತರ ಪರಿಚಾರಕರಿಗೆ ಉಚಿತ ಆಹಾರ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬ್ಯಾಂಕ್ ಉದ್ಯೋಗಿಗಳೂ ಸಹ ಕೊರೊನಾ ಅಪಾಯದ ಸಂದರ್ಭದಲ್ಲಿಯೂ ತಮ್ಮ ಗ್ರಾಹಕರಿಗೆ ಸೇವೆ ನೀಡುವುದರ ಜೊತೆಗೆ ಸಾಮಾಜಿಕ ಕೈಂಕರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕೆನರಾ ಬ್ಯಾಂಕಿನ ಕ್ಷೇತ್ರೀಯ ಕಾರ್ಯಾಲಯದ ವಿಭಾಗೀಯ ಪ್ರಬಂಧಕರಾದ ಜಿ.ಆರ್. ನಾಗರತ್ನ ಮಾತನಾಡಿ, ಕೆನರಾ ಬ್ಯಾಂಕ್ ಕೊರೊನಾ ಸಂತ್ರಸ್ತರಿಗೆ ಮತ್ತು ಆಸ್ಪತ್ರೆಗಳಿಗೆ ಹಲವಾರು ಸಾಲ ಯೋಜನೆಗಳನ್ನೂ ಜಾರಿಗೆ ತಂದಿದೆ. ಇದನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಲು ಮನವಿ ಮಾಡಿದರು.

ನಗರ ಪಾಲಿಕೆಯ ನಾಮನಿರ್ದೇಶಿತ ಸದಸ್ಯರಾದ ಶಿವನಗೌಡ ಟಿ ಪಾಟೀಲ್, ಕೆ. ರಾಘವೇಂದ್ರ ನಾಯರಿ, ಕೆನರಾ ಬ್ಯಾಂಕ್ ಹಿರಿಯ ಅಧಿಕಾರಿಗಳಾದ ಎಸ್.ವಿ.ರಾಮಕೃಷ್ಣ ನಾಯ್ಕ್, ಬಿ.ಎ.ಸುರೇಶ್, ಹಂಪಣ್ಣ, ಕೆ. ಶಶಿಕುಮಾರ್, ಕೆ.ವಿಶ್ವನಾಥ ಬಿಲ್ಲವ, ಆರ್. ಆಂಜನೇಯ, ಸಿ.ಪರಶುರಾಮ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾಜ್ಯ ಗೀತಗಾಯನ ಸ್ಪರ್ಧೆ ಅವಧಿ ವಿಸ್ತರಣೆ

ದಾವಣಗೆರೆ, ಜೂ.9- ಕರ್ನಾಟಕ ಸುಗಮ ಸಂಗೀತ ಪರಿಷತ್ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ ಗೀತಗಾಯನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ರಾಜ್ಯಾಧ್ಯಕ್ಷ ವೈ.ಕೆ. ಮುದ್ದುಕೃಷ್ಣ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸುವ ದಿನಾಂಕವನ್ನು ಇದೇ ದಿನಾಂಕ 10 ರವರೆಗೆ ವಿಸ್ತರಿಸಲಾಗಿದೆ ಎಂದು ಸಂಗೀತ ನಿರ್ದೇಶಕ ಶ್ರೀನಿವಾಸ ಉಡುಪ ತಿಳಿಸಿದ್ದಾರೆ.

ಸ್ಪರ್ಧಿಗಳು ಭಾವಗೀತೆ, ಭಕ್ತಿಗೀತೆ, ಜನಪದಗೀತೆ ಯಾವುದಾದರೂ ಒಂದು ಹಾಡನ್ನು ಶೃತಿ ಪೆಟ್ಟಿಗೆಯೊಂದಿಗೆ ಪಲ್ಲವಿ ಮತ್ತು ಚರಣದೊಂದಿಗೆ ತಮ್ಮ ಮೊಬೈಲ್‌ನಲ್ಲಿ 2 ನಿಮಿಷ ವಿಡಿಯೋ, ಚಿತ್ರೀಕರಿಸಿ 9141470320 ಈ ವ್ಯಾಟ್ಸಾಪ್ ನಂಬರ್‌ಗೆ ಕಳಿಸಬೇಕು ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ 9901122728.

## ಹರಿಹರ ತಾಲ್ಲೂಕಿನಲ್ಲಿ 636 ಜನರಿಗೆ ಟೆಸ್ಟ್

ಮಲೇಬೆನ್ನೂರು, ಜೂ.9- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರ 40 ಜನರಿಗೆ ಕೊರೊನಾ ಟೆಸ್ಟ್ ಮಾಡಿದ್ದು, ನಾಲ್ವರಿಗೆ ಪಾಸಿಟಿವ್ ಬಂದಿದೆ.

ಹನಗವಾಡಿಯಲ್ಲಿ 63, ಕುಣೆಬೆಳಕೆರೆಯಲ್ಲಿ 117, ಗುತ್ತೂರಿನಲ್ಲಿ 104, ಹರಿಹರದಲ್ಲಿ 96 ಸೇರಿದಂತೆ ಹರಿಹರ ತಾಲ್ಲೂಕಿನಲ್ಲಿ ಇವತ್ತು 636 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದೆ. ರ್‍ಯಾಪಿಡ್ ಟೆಸ್ಟ್‌ನಲ್ಲಿ 22 ಜನರಿಗೆ ಸೋಂಕು ದೃಢಪಟ್ಟಿದೆ.

ಬುಧವಾರ ಬೆಳಗಿನ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 61 ಜನರಿಗೆ ಪಾಸಿಟಿವ್ ಬಂದಿದೆ.

## ಪರಿಸರದ ಮಡಿಲಲ್ಲಿನ ಹಸಿರೇ ಜೀವರಕ್ಷಕ: ಮಿಟ್ಲಕಟ್ಟೆ ವೀರಾಚಾರ್



ದಾವಣಗೆರೆ, ಜೂ.9- ನಗರದ ಎಂಸಿಸಿ ಬಿ ಬ್ಲಾಕ್ ನ ಶ್ರೀ ವೆಂಕಟೇಶ್ವರ ದೇವಸ್ಥಾನ ರಸ್ತೆಯಲ್ಲಿ ಸಾರ್ವಜನಿಕರೊಡಗೂಡಿ ಪರಿಸರ ಪ್ರೇಮಿಗಳು ಇಂದು ಸಸಿಗಳನ್ನು ನೆಟ್ಟು ವಿಶ್ವ ಪರಿಸರ ದಿನದ ಆಚರಣೆ ಮುಖೇನ ಪರಿಸರ ಸಂರಕ್ಷಣೆಗೆ ಜಾಗೃತಿಯೊಂದಿಗೆ ಕರೆ ನೀಡಲಾಯಿತು.

ಆಮ್ಲಜನಕವು ಸಮಯಕ್ಕೆ ಸರಿಯಾಗಿ ಸಿಗದೇ, ಕೊರತೆಯುಂಟಾಗಿ ಕೊರೊನಾ ಬಾಧಿತರು ನರಳಾಡುವಂತಹ ಸ್ಥಿತಿ ತಲುಪಿದೆ. ಪ್ರಾಕೃತಿಕವಾಗಿ ಉಚಿತವಾಗಿ ಸಿಗುವ ಆಮ್ಲಜನಕ ಪ್ರಸ್ತುತ ಕ್ಷೀಣಿಸುತ್ತಿದೆ. ಅಲ್ಲದೇ ಹಣ ಕೊಟ್ಟು ಕೊಂಡುಕೊಳ್ಳುವಂತಹ ಸ್ಥಿತಿಯೂ ಬಂದೊದಗಿದೆ. ಜೀವ ಉಳಿಸಿಕೊಳ್ಳಲು ಕೃತಕ ಆಮ್ಲಜನಕದ ಮೊರೆ ಹೋಗಲಾಗಿದೆ. ಅಷ್ಟೇ ಅಲ್ಲದೇ ಪರಿಸರದ ಹಸಿರಿನಲ್ಲಿ ಸಿಗುವ ಆಮ್ಲಜನಕ ಹಿಡಿದಿಟ್ಟು ಜೀವ ರಕ್ಷಿಸಲಾಗುತ್ತಿದೆ. ಇದಕ್ಕೆಲ್ಲಾ ನಗರೀಕರಣ, ಅಭಿವೃದ್ಧಿಗಾಗಿ ಪರಿಸರದಲ್ಲಿನ ಹಸಿರು ನಾಶ ಮಾಡುತ್ತಾ, ಪರಿಸರಮಾಲಿನ್ಯಹಾಳುಮಾಡುತ್ತಿರುವುದೇ ಕಾರಣ ಎಂದು ಪರಿಸರ ರಕ್ಷಕ ಮಿಟ್ಲಕಟ್ಟೆ ವೀರಾಚಾರ್ ವಿಷಾದಿಸಿದರು.

ಹಸಿರೇ ಉಸಿರು, ಪರಿಸರ ಸಂರಕ್ಷಣೆಯೇ ನಮ್ಮ ಸಂರಕ್ಷಣೆ. ಪ್ರಾಕೃತಿಕ ಸಂಪತ್ತೇ ನಮ್ಮ ಜೀವಾಳ. ಪ್ರಸ್ತುತ ಕೊರೊನಾ ಕಾಲಘಟ್ಟದಲ್ಲಿ ಪರಿಸರದ ಮಹತ್ವದ ಅರಿವಾಗುತ್ತಿದೆ. ಪರಿಸರ ನಾಶದಿಂದ ಮನುಕುಲವೇ ನಾಶ ಎಂಬ ಸತ್ಯದ ಮನವರಿಕೆ ಈಗ ಕಾಣಲಾಗುತ್ತಿದೆ. ಇನ್ನು ಮುಂದಾದರೂ ಪರಿಸರದಲ್ಲಿನ ಹಸಿರು ಉಳಿಸಿ, ಮತ್ತಷ್ಟು ಬೆಳೆಸಿ, ಪೋಷಿಸಿದರೆ ಜೀವಕ್ಕೆ ಮತ್ತು ಜೀವನಕ್ಕೆ ರಕ್ಷಕವಾಗಲಿದೆ. ಪ್ರತಿಯೊಬ್ಬರೂ ಪರಿಸರ ಕಾಳಜಿ ತೋರಬೇಕು. ಮುಖ್ಯವಾಗಿ ಯುವ ಸಮೂಹ ಪರಿಸರ ಸಂರಕ್ಷಣೆಗೆ ಹೆಚ್ಚು ಪ್ರಯತ್ನಿಸಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಪರಿಸರ ಪ್ರೇಮಿಗಳಾದ ಕೆ.ಟಿ. ಗೋಪಾಲಗೌಡ, ಎಂ.ಜಿ. ಶ್ರೀಕಾಂತ್, ಗಿರೀಶ್ ಎಸ್. ದೇವರಮನಿ, ಪ್ರಸನ್ನ ಬೆಳಕೆರೆ, ಮಲ್ಲಿಕಾರ್ಜುನ ಇಂಗಳೇಶ್ವರ, ರಾಘವೇಂದ್ರ ಚವ್ಹಾಣ್, ಪ್ರಕಾಶ್ ಐಗೂರ್, ನಿವಾಸಿಗಳಾದ ರಮೇಶ್, ಉಮೇಶ್, ಅಶೋಕ, ನವೀನ್ ಕುಮಾರ್ ಸೇರಿದಂತೆ ಇತರರು ಇದ್ದರು.

## ಬೀದಿ ನಾಯಿ ದಾಳಿ : ಬಾಲಕಿಗೆ ಪರಿಹಾರಕ್ಕೆ ಒತ್ತಾಯ

ದಾವಣಗೆರೆ, ಜೂ.9- ಮೊನ್ನೆ ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಾಲಕಿ ಖನಿಜ್ ಫಾತೀಮಾ ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ನೀಡುವಂತೆ ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾದ ಜಿಲ್ಲಾಧ್ಯಕ್ಷ ಫಯಾಜ್ ಅಹ್ಮದ್ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಿಗಳ ದಾಳಿಗೆ ತುತ್ತಾದ ಬಾಲಕಿ ತೀವ್ರವಾಗಿ ಗಾಯಗೊಂಡು ಸಾವು-ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದು, ಬಾಲಕಿ ಚಿಕಿತ್ಸಾ ವೆಚ್ಚ ಭರಿಸಲು ಪಾಲಕರಿಗೆ ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಪಾಲಿಕೆ ಆಯುಕ್ತರು, ಮಹಾಪೌರರು ಹಾಗೂ ಆರೋಗ್ಯಾಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರಿಯಾಜ್ ರಜ್ವಿ, ಮಹಬೂಬ್ ಸುಭಾನಿ, ಇಸ್ಮಾಯಿಲ್ ಜಬೀವುಲ್ಲಾ, ಸಲಾಂ ಶೇಖ್, ಸಾಧಿಕ್, ಮನ್ಸೂರ್ ಅಲಿ, ಗೌಸ್‌ಪೀರ್ ಉಪಸ್ಥಿತರಿದ್ದರು.

## ಇಂದು ಪ್ರತಿಭಟನೆ

ಪಲ್ಸ್ ಪೋಲಿಯೋ ಮಾದರಿಯಲ್ಲಿ ಪ್ರತಿ ಮನೆ ಮನೆಗೂ ತೆರಳಿ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮ ರೂಪಿಸುವಂತೆ ಒತ್ತಾಯಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ವತಿಯಿಂದ ಜಿಲ್ಲೆಯಾದ್ಯಂತ ಇಂದು ಅಂತರ್ಜಾಲದ ಮೂಲಕ 100 ಪ್ರತಿಭಟನೆಗಳು ನಡೆಯಲಿವೆ ಎಂದು ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ.

## ಕೊರೊನಾ ಸೋಂಕಿತರಿಗೆ ಕಾರಾ - ಮಂಡಕ್ಕಿ ವಿತರಣೆ



ದಾವಣಗೆರೆ, ಜೂ.9 - ಜೆ.ಹೆಚ್. ಪಟೇಲ್ ಬಡಾವಣೆಯ ಕೋವಿಡ್ ಸೆಂಟರ್, ಬಾಡಾ ಕ್ರಾಸ್ ಬಳಿ ಇರುವ ಕೋವಿಡ್ ಸೆಂಟರ್, ತರಳಬಾಳು ಕೋವಿಡ್ ಸೆಂಟರ್‌ನಲ್ಲಿ ಇರುವ ಸೋಂಕಿತರಿಗೆ ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್.ಬಸವಂತಪ್ಪ ಅವರು ಕಾರಾ - ಮಂಡಕ್ಕಿಯನ್ನು ವಿತರಣೆ ಮಾಡುವ ಮುಖಾಂತರ ಸೋಂಕಿತರಿಗೆ ವಿಶೇಷವಾಗಿ ಖುಷಿ ಪಡಿಸಿದರು.

ಜೆ.ಹೆಚ್.ಪಟೇಲ್ ಬಡಾವಣೆಯ ಕೋವಿಡ್ ಸೆಂಟರ್‌ನಲ್ಲಿ ಸೋಂಕಿತರಿಗೆ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಿ, ಸ್ವತಃ ಅವರೇ ಹಾಡುಗಳನ್ನು ಹಾಡುವುದರ ಮುಖಾಂತರ ಅವರಲ್ಲಿ ಧೈರ್ಯ ತುಂಬುವ ಕೆಲಸ ಮಾಡಿದ್ದರು.

## ವಾರಿಯರ್ಸ್‌ಗೆ ಉಪಹಾರ ವಿತರಣೆ



ದಾವಣಗೆರೆ, ಜೂ.9- ನಿವೃತ್ತ ಕೃಷಿ ಅಧಿಕಾರಿ ಎಂ.ಬಿ.ಜಗನ್ನಾಥ್ ಅವರ ಪುತ್ರ, ಸ್ಟಾರ್ ಹೆಲ್ತ್ ಇನ್ಸೂರೆನ್ಸ್ ಸೇಲ್ಸ್ ಮ್ಯಾನೇಜರ್ ಎಂ.ಜೆ.ದತ್ತಾತ್ರೇಯ ಅವರ ಪುತ್ರಿ ಅದ್ವಿಕ ರಾವ್ ಜನ್ಮ ದಿನದ ಅಂಗವಾಗಿ ಕೊರೊನಾ ವಾರಿಯರ್ಸ್ ಪೊಲೀಸ್ ಸಿಬ್ಬಂದಿಗೆ ಉಪಹಾರ ವಿತರಿಸಲಾಯಿತು.

## ಸಂಕಲ್ಪ ಸೇವಾ ಫೌಂಡೇಷನ್‌ನಿಂದ ದಿನಸಿ ಕಿಟ್ ವಿತರಣೆ



ದಾವಣಗೆರೆ, ಜೂ.9- ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ಆಟೋ ಚಾಲಕರು, ಬಡ ಕೂಲಿ ಕಾರ್ಮಿಕರಿಗೆ ಹರ್ಷಿತ್ ಕಂಪ್ಯೂಟರ್ ಕಾರ್ಯಾಲಯದಲ್ಲಿ ದಿನಸಿ ಕಿಟ್‌ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಸಂಕಲ್ಪ ಸೇವಾ ಸಂಸ್ಥೆಯ ಮುಖ್ಯಸ್ಥ ಜಿ. ಮಹಾಂತೇಶ್, ಅನಿಲ್ ರಾಯ್ಕರ್, ಪಿ. ಭರ್ಮಪ್ಪ, ಕೆ. ಕರಿಬಸಪ್ಪ, ಎಂ.ಹೆಚ್. ಚಿದಾನಂದ್, ಪಿ.ಟಿ. ಯುವರಾಜ್, ವಿ. ರಾಜು, ಎಂ. ಮಾಲ, ಯಾಸ್ಮಿನ್ ಬಾನು ಉಪಸ್ಥಿತರಿದ್ದರು.

**WANTED**

1. SALESMAN – 3 NO.S
2. DELIVERY BOYS – 3 NO.S

CONTACT :
BALAJI MEDICALS
# 251, P.B.ROAD, OPP. OLD BUSTAND
OPP. CAUVERY BAKERY, DAVANGERE – 577002.
MOBILE : 94491 58255

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

**ಮರು ಟೆಂಡರ್ ಪ್ರಕಟಣೆ**

ಉಲ್ಲೇಖ: 1) ಸಂ/ಕಾಇಂ/ಕನೀನಿನಿ/ಭನಾವಿ.5:ದಾ/ಸ.ಇಂ–1/4701–ಸಿ.ಸಿ. ರಸ್ತೆ & ಚರಂಡಿ/402/10/2021–22 ದಿನಾಂಕ: 04.06.2021

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 4701–ಎಂ&ಎಂಐ ಭದ್ರಾ ಅಡಿಯಲ್ಲಿನ ಕಾಮಗಾರಿಗಳಿಗೆ ಏಕ–ಲಕೋಟೆ ಪದ್ಧತಿಯಡಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ದಿನಾಂಕ: **07.06.2021 ರ ಬೆಳಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **15.06.2021 ರ ಸಂಜೆ 4.00** ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: **10.06.2021** ರಂದು 5.00 ಘಂಟೆವರೆಗೆ ಮತ್ತು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 16.06.2021 ರಂದು ಸಂಜೆ 4.30 ಘಂಟೆ**.

ಒಟ್ಟು ಕಾಮಗಾರಿಗಳ ಸಂಖ್ಯೆ :–3, ಕಾಮಗಾರಿಗಳ ಮೊತ್ತ–ರೂ 5.00 ಲಕ್ಷಗಳು ರಿಂದ ರೂ. 15.00 ಲಕ್ಷಗಳು.

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/126/ಎಂಸಿಎ/2021–22

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.



# ಕೃಷಿ ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕ ರಾಮಪ್ಪ

ಹರಿಹರ, ಜೂ.9- ನಗರದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕೃಷಿ ಅಭಿಯಾನ ಕಾರ್ಯಕ್ರಮಕ್ಕೆ ಶಾಸಕ ಎಸ್. ರಾಮಪ್ಪ ಅವರು ಇಂದು ಚಾಲನೆ ನೀಡಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಉಪಯುಕ್ತವಾದ ಕೃಷಿ ಮಾಹಿತಿಯನ್ನು ಹೊತ್ತ ವಾಹನ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿ ಸಂಚರಿಸಿ, ರೈತರಿಗೆ ಕೃಷಿ ಮಾಹಿತಿಯನ್ನು ಪ್ರಚಾರ ಮಾಡಲಾಗುತ್ತದೆ. ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು, ಕೃಷಿ ಮತ್ತು ಇತರೆ ಇಲಾಖೆಗಳಿಂದ ರೈತರಿಗೆ ದೊರೆಯುವ ಸೌಲಭ್ಯಗಳ ಮಾಹಿತಿಗಳು ವಾಹನದಲ್ಲಿ ಚಿತ್ರಿತವಾಗಿದ್ದು, ಮೂರು ದಿನಗಳ ಕಾಲ ಸಂಚರಿಸಿ ಮಾಹಿತಿ ನೀಡಲಿದೆ.

ಇದೇ ವೇಳೆ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿ ಬೆಳೆಯಲೆಂದು ರೈತರನ್ನು ಪ್ರೋತ್ಸಾಹಿಸಲು ತೊಗರಿ ಕಿಟ್‌ಗಳನ್ನು ರೈತರಿಗೆ ಶಾಸಕರು ನೀಡಿ, ಮೆಕ್ಕೆಜೋಳದ ಜೊತೆಗೆ ತೊಗರಿ ಬೆಳೆಯುವುದು ರೈತನಿಗೆ ಲಾಭದಾಯಕವಾಗಿದೆ ಎಂದು ಹೇಳಿದರು.

ದಾವಣಗೆರೆ ಉಪವಿಭಾಗದ ಉಪಕೃಷಿ ನಿರ್ದೇಶಕ ತಿಪ್ಪೇಸ್ವಾಮಿ, ಸಹಾಯಕ ಕೃಷಿ ನಿರ್ದೇಶಕ ವಿ.ಪಿ. ಗೋವರ್ಧನ್, ಕೃಷಿ ಅಧಿಕಾರಿ ಕೆ. ಮಲ್ಲಿಕಾರ್ಜುನ ಮತ್ತಿತರರು ಹಾಜರಿದ್ದರು.

# ಲಸಿಕೆ ದಾಸ್ತಾನು, ತಾಪಮಾನ ಮಾಹಿತಿ ನೀಡದಂತೆ ಸೂಚನೆ

ನವದೆಹಲಿ, ಜೂ. 9 – ಲಸಿಕೆ ದಾಸ್ತಾನು, ಶೇಖರಿಸಿಡುವ ತಾಪಮಾನ ಮತ್ತಿತರೆ ಮಾಹಿತಿಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳಬಾರದು. ಈ ಮಾಹಿತಿ ಲಸಿಕಾ ಯೋಜನೆ ಅಭಿವೃದ್ಧಿಗೆ ಮಾತ್ರ ಬಳಕೆಯಾಗಬೇಕು ಎಂದು ರಾಜ್ಯಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ವಿಶ್ವಸಂಸ್ಥೆ ಅಭಿವೃದ್ಧಿ ಯೋಜನೆ (ಯು.ಎನ್.ಡಿ.ಪಿ.) ಜೊತೆಗೂಡಿ ಕೇಂದ್ರ ಸರ್ಕಾರ ಇವಿನ್ ಎಂಬ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಇದು ಲಸಿಕೆ ದಾಸ್ತಾನು ಹಾಗೂ ಸಂಗ್ರಹಿಸುವ ತಾಪಮಾನವನ್ನು ರಾಷ್ಟ್ರ ಮಟ್ಟದಿಂದ ಹಿಡಿದು ತಾಲ್ಲೂಕು ಹಂತದವರೆಗೆ ಸಂಗ್ರಹಿಸುತ್ತದೆ.

ಸಂಗ್ರಹಣೆ ಮಾಹಿತಿಯನ್ನು ಯಾವುದೇ ಸಂಘಟನೆ, ಸಹಭಾಗಿ, ಮಾಧ್ಯಮ ಸಂಸ್ಥೆ, ಸಾರ್ವಜನಿಕ ವೇದಿಕೆಗಳಲ್ಲಿ ಅನುಮತಿ ಇಲ್ಲದೇ ಹಂಚಿಕೊಳ್ಳಬಾರದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

# 2ನೇ ಹಂತದ ಕುಡಿವ ನೀರಿನ ಯೋಜನೆಗೆ ಕ್ರಮ



ಹರಪನಹಳ್ಳಿ, ಜೂ.9- ಕಳೆದ ವರ್ಷದಿಂದ ಕೊರೊನಾ ಆವರಿಸಿದ್ದರೂ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗಿಲ್ಲ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಕಳೆದ ಬಾರಿ 16 ಕೋಟಿ ರೂ. ಅಭಿವೃದ್ಧಿ ಕಾರ್ಯಕ್ಕೆ ಬಂದಿತ್ತು. ಈ ಬಾರಿ ಎಲ್ಲಾ ಅನುದಾನವನ್ನು ಕೋವಿಡ್ ನಿಯಂತ್ರಣ ಕಾರ್ಯಕ್ಕೆ ವರ್ಗಾಯಿಸಲಾಗಿದೆ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ತಿಳಿಸಿದ್ದಾರೆ.

ತಾಲ್ಲೂಕಿನ ಕಡತಿ, ಮಾದಾಪುರ, ಕೂಲಹಳ್ಳಿ ಗ್ರಾಮಗಳಲ್ಲಿ 4.6 ಕೋಟಿ ವೆಚ್ಚದಲ್ಲಿ ಸಿ.ಸಿ. ರಸ್ತೆಗೆ ಭೂಮಿ ಪೂಜೆ, ಪಟ್ಟಣದಲ್ಲಿ ಪುರಸಭಾ ಪೌರ ಕಾರ್ಮಿಕರು, ಅರ್ಚಕರು, ಪತ್ರಕರ್ತರಿಗೆ ಆಹಾರ ಧಾನ್ಯಗಳ ಕಿಟ್, ಮಾಸ್ಕ್, ಸ್ಯಾನಿಟೈಸರ್ ವಿತರಿಸಿದ ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಪಟ್ಟಣದಲ್ಲಿ ದಿನ ವಹಿ ಸಂತೆ ಮಾರುಕಟ್ಟೆ ಕಟ್ಟಡ ಅಭಿವೃದ್ಧಿಗಾಗಿ 2.70 ಕೋಟಿ ರೂ. ಅನುಮೋದನೆ ದೊರೆತಿದ್ದು, ಶೀಘ್ರ ಟೆಂಡರ್ ಆಗುತ್ತದೆ ಎಂದು ಅವರು ಹೇಳಿದರು.

ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನೂರು ಬೆಡ್‌ಗಳಿದ್ದು, ಅದರಲ್ಲಿ 80 ಬೆಡ್‌ಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿಡಲಾಗಿದೆ ಎಂದ ಅವರು, ದಿನದಿಂದ ದಿನಕ್ಕೆ ತಾಲ್ಲೂಕಿನಲ್ಲಿ ಕೋವಿಡ್ ಸೋಂಕು ಸಾಕಷ್ಟು ಇಳಿಮುಖವಾಗುತ್ತಿರುವುದು ಸಂತಸ ತಂದಿದೆ ಎಂದರು.

ಈಗಾಗಲೇ ಪಟ್ಟಣದ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದು, 1ನೇ ಹಂತದ ಕುಡಿಯುವ ನೀರಿನ ಯೋಜನೆ ಹಳೆಯದಾಗಿದ್ದು, 2ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಸರ್ಕಾರದ ಹಂತದಲ್ಲಿ ಮಾತನಾಡುತ್ತೇನೆ. ತಾಲ್ಲೂಕಿನ ಅಪೌಷ್ಠಿಕತೆ ಹೊಂದಿದ 28 ಮಕ್ಕಳಿಗೆ ಮೊಟ್ಟೆ, ಹಾಲು, ಕಿಚಡಿ ಹಾಗೂ ಸಮಯಕ್ಕೆ ಸರಿಯಾಗಿ ಊಟವನ್ನು ಸಹ ನೀಡಲಾಗುತ್ತಿದೆ ಎಂದು ಶಾಸಕರು ವಿವರಿಸಿದರು.

ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಪುರಸಭೆ ಸದಸ್ಯರುಗಳಾದ ಕಿರಣ್‌ಕುಮಾರ್ ಶಾನಭೋಗ, ಜಾಕೀರ್, ಮುಖಂಡರಾದ ಶಿರಗನಹಳ್ಳಿ ವಿಶ್ವನಾಥ, ಎಂ.ಪಿ. ನಾಯ್ಕ್, ಯಡಿಹಳ್ಳಿ ಶೇಖರಪ್ಪ, ಆರ್. ಕರೇಗೌಡ, ಮೆಡಿಕಲ್ ಶಾಪ್ ತಿಮ್ಮಣ್ಣ, ಕಡತಿ ರಮೇಶ್, ಗುಂಡಿ ಮಂಜುನಾಥ, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ, ಯು.ಪಿ. ನಾಗರಾಜ, ತಹಶೀಲ್ದಾರ್ ನಂದೀಶ್, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಗೊಂದಿ, ಸಿಡಿಪಿಒ ಮಂಜುನಾಥ, ಸಿಪಿಐ ನಾಗರಾಜ ಎಂ. ಕಮ್ಮಾರ, ಪಿಎಸ್‌ಐ ಪ್ರಕಾಶ್, ಪುರಸಭಾ ಮುಖ್ಯಾಧಿಕಾರಿ ನಾಗರಾಜನಾಯ್ಕ್ ಇನ್ನಿತರರಿದ್ದರು.

## ಹೈಕಮಾಂಡ್ ತೀರ್ಮಾನಕ್ಕೆ ಬದ್ಧ

ಸಿಎಂ ಯಡಿಯೂರಪ್ಪನವರ ಪರ, ವಿರೋಧವಾಗಿ ಸಹಿ ಸಂಗ್ರಹ ಕುರಿತು ನನಗೆ ಮಾಹಿತಿ ಇಲ್ಲ. ನನಗೆ ಯಾರೂ ಸಹಿ ಮಾಡಿ ಎಂದು ಕೇಳಿಲ್ಲ. ನಾನು ಯಾವತ್ತು ಪಕ್ಷದ ಪರ. ಯಡಿಯೂರಪ್ಪ ನಮ್ಮ ಸರ್ಕಾರದ ಮುಖ್ಯಮಂತ್ರಿ. ಅವರು ಶಿಸ್ತಿನ ಕಾರ್ಯಕರ್ತರಾಗಿ ಹೈಕಮಾಂಡ್ ಹೇಳಿದರೆ ನಾನು ಸ್ಥಾನ ತ್ಯಜಿಸುತ್ತೇನೆ ಎಂದು ಹೇಳಿದ್ದಾರೆ. ನಾನು ಯಾವಾಗಲೂ ಪಕ್ಷದ ಪರವಾಗಿ ಇರುತ್ತೇನೆ. ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ. ಯಡಿಯೂರಪ್ಪನವರೇ ಇನ್ನೂ ಎರಡು ವರ್ಷ ಮುಂದುವರೆಯುತ್ತಾರೆಯೇ? ಎಂಬ ಪ್ರಶ್ನೆಗೆ ಆ ಬಗ್ಗೆ ಹೇಳಲು ನಾನು ಜೋತಿಷಿ ಅಲ್ಲ.

**- ಜಿ.ಕರುಣಾಕರ ರೆಡ್ಡಿ**, ಶಾಸಕರು, ಹರಪನಹಳ್ಳಿ

# ಉಚಿತ ಲಸಿಕೆ ಶಿಬಿರಕ್ಕೆ ಎಸ್ಸೆಸ್, ಎಸ್ಸೆಸ್ಸೆಂ, ಡಿಸಿ ಭೇಟಿ





ದಾವಣಗೆರೆ, ಜೂ.9- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಹಮ್ಮಿಕೊಂಡಿರುವ ಉಚಿತ ಲಸಿಕಾ ಶಿಬಿರವು ಇಂದೂ ಮುಂದುವರೆದಿದ್ದು, ಶಿಬಿರದ ಸ್ಥಳಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಮತ್ತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರುಗಳು ಭೇಟಿ ನೀಡಿ, ಪ್ರತಿಯೊಬ್ಬರೂ ಲಸಿಕೆ ಪಡೆಯುವಂತೆ ಮನವಿ ಮಾಡಿದರಲ್ಲದೇ ಲಸಿಕೆ ಪಡೆದ ನಾಗರಿಕರ ಯೋಗಕ್ಷೇಮ ವಿಚಾರಿಸಿದರು.

ನಗರ ಪಾಲಿಕೆಯ 9, 11, 12 ಮತ್ತು 14ನೇ ವಾರ್ಡುಗಳಿಗೆ ಸಂಬಂಧಿಸಿದಂತೆ ಲಸಿಕೆ ಶಿಬಿರವು ಕೆ.ಆರ್.ರಸ್ತೆಯ ಡಾ. ಶಾಮನೂರು ಶಿವಶಂಕರಪ್ಪ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಾಡಾಗಿತ್ತು. ಪಾಲಿಕೆ ಸದಸ್ಯ ಜಾಕೀರ್ ಅಲಿ ಮತ್ತು ಮಾಜಿ ಸದಸ್ಯ ಶಫೀಕ್ ಪಂಡಿತ್ ಸೇರಿದಂತೆ ನೂರಾರು ನಾಗರಿಕರು ಲಸಿಕೆ ಪಡೆದರು.

ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ, ಸಂಶೋಧನಾ ಕೇಂದ್ರದ ಸಿಬ್ಬಂದಿ ವರ್ಗದವರು ಲಸಿಕಾ ಶಿಬಿರವನ್ನು ನಡೆಸಿಕೊಟ್ಟರು. ಲಸಿಕೆ ಪಡೆದ ನಾಗರಿಕರಿಗೆ ನೀರು ಮತ್ತು ಬಿಸ್ಕತ್‌ಗಳನ್ನು ವಿತರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಆರೀಫ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರುಗಳಾದ ಜಾಕೀರ್ ಅಲಿ, ಸೈಯದ್ ಚಾರ್ಲಿ, ಕೆ.ಚಮನ್ ಸಾಬ್, ಶಫೀಕ್ ಪಂಡಿತ್, ಬುತ್ತಿ ಗೌಸ್, ವಿನಾಯಕ ಪೈಲ್ವಾನ್, ಪಾಮೇನಹಳ್ಳಿ ನಾಗರಾಜ್, ಗಣೇಶ್ ಹುಲ್ಮನಿ, ಮುಖಂಡರುಗಳಾದ ಬುತ್ತಿ ಗಫೂರ್, ಬರ್ಕತ್ ಅಲಿ ಪೈಲ್ವಾನ್, ಲಾಲ್ ಆರೀಫ್, ದಾದಾಪೀರ್, ಸಲೀಂ, ಅನಿಲ್‌ಕುಮಾರ್, ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಆರೋಗ್ಯ ಸಚಿವರನ್ನು ಭೇಟಿ ಮಾಡಿದ ಶಾಸಕ ರಾಮಪ್ಪ



ಮಲೇಬೆನ್ನೂರು, ಜೂ.9- ಶಾಸಕ ಎಸ್. ರಾಮಪ್ಪ ಅವರು ಬೆಂಗಳೂರಿನಲ್ಲಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರನ್ನು ನಿನ್ನೆ ಭೇಟಿ ಮಾಡಿ, ಹರಿಹರ ನಗರದ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, 100 ಹಾಸಿಗೆಗಳನ್ನು ಕಲ್ಪಿಸುವಂತೆ ಹಾಗೂ ಮಲೇಬೆನ್ನೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ 20 ಆಕ್ಸಿಜನ್ ಬೆಡ್‌ಗಳನ್ನು ಸೌಲಭ್ಯ ಒದಗಿಸುವಂತೆ ಮನವಿ ಮಾಡಿದರು.

ಅಲ್ಲದೆ, ಎರಡೂ ಆಸ್ಪತ್ರೆಗಳಿಗೆ ಅಗತ್ಯ ಇರುವ ವೈದ್ಯರು ಮತ್ತು ಸಿಬ್ಬಂದಿಗಳನ್ನು ನೇಮಿಸುವುದು ಹಾಗೂ ತಾಲ್ಲೂಕಿಗೆ ಕೋವಿಡ್ ಲಸಿಕೆಯನ್ನು ಹೆಚ್ಚು ಪೂರೈಸುವಂತೆ ನಿರ್ದೇಶನ ನೀಡುವಂತೆಯೂ ಮಾಡಿದ ಮನವಿಗೆ ಸ್ಪಂದಿಸಿದ ಸಚಿವರು, ಸಂಬಂಧಪಟ್ಟವರಿಗೆ ಫೋನ್ ಮಾಡಿ, ರಾಮಪ್ಪ ಅವರ ಮನವಿಯಂತೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದ್ದಾರೆ.


# ಲಸಿಕೆ ಪ್ರಮಾಣ ಪತ್ರದಲ್ಲಿ ತಿದ್ದುಪಡಿ

ನವದೆಹಲಿ, ಜೂ. 9 - ಲಸಿಕೆ ಫಲಾನುಭವಿಗಳು ತಮಗೆ ಕೊವಿನ್ ವೆಬ್ ತಾಣದ ಮೂಲಕ ನೀಡಲಾಗುವ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ತರುವ ಅವಕಾಶ ಪಡೆದುಕೊಂಡಿದ್ದಾರೆ.

ಕೊವಿನ್ ವೇದಿಕೆಯಲ್ಲಿ ಸರ್ಕಾರ ಹೊಸ ಅಂಶವನ್ನು ಸೇರ್ಪಡೆ ಮಾಡಿದ್ದು, ಆ ಮೂಲಕ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ವಿಕಾಸ್ ಶೀಲ್ ಹೇಳಿದ್ದಾರೆ.

ವ್ಯಕ್ತಿಗಳ ಹೆಸರು, ಜನ್ಮ ದಿನ ಹಾಗೂ ಲಿಂಗದಲ್ಲಿ ಏನಾದರೂ ಆಕಸ್ಮಿಕ ತಪ್ಪುಗಳಾಗಿದ್ದರೆ ಆ ಬಗ್ಗೆ ಕೊವಿನ್ ವೆಬ್ ತಾಣದಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದು ಎಂದವರು ಟ್ವೀಟ್ ಮೂಲಕ ತಿಳಿಸಿದ್ದಾರೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 8-6-2021ರಂದು ನಿಧನರಾದ ಎಲೆಕ್ಟ್ರಿಕಲ್ ಕಂಟ್ರ್ಯಾಕ್ಟರ್ ಹಾಗೂ ನಮ್ಮೆಲ್ಲರ ಆತ್ಮೀಯರಾಗಿದ್ದ

**ಶ್ರೀ ನರಸಿಂಹರಾಜು ಶೆಟ್ಟಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಪ್ರಕಾಶ್ ✦ ಷಣ್ಮುಖ ✦ ಸುಂದರ್ ✦ ರಾಘವೇಂದ್ರ ಶೆಟ್ರು ✦ ನೌಷಾದ್







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte